# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038



HAMPI TIMES
No.1 Leading Local News Paper
85,000
E-PAPER READERS
94486 33038
NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201





ಸಂಪುಟ:02 • ಸಂಚಿಕೆ: 57 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 25.08.2024 • ಭಾನುವಾರ • ಪುಟ:04 • ಬೆಲೆ:2
Volume:02 • Issue: 57 • PRGI No:KARKAN/2023/88055 • VIJAYANAGARA • 25.08.2024 • Sunday • Page:04 • Rs:2


# ರೈತಸ್ನೇಹಿ ಬಿಡಿಸಿಸಿ ಬ್ಯಾಂಕ್‌ಗೆ 12.53 ಕೋಟಿ ರೂ ಲಾಭ

## ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಕೆ.ತಿಪ್ಪೇಸ್ವಾಮಿ ಘೋಷಣೆ | 14 ಶಾಖೆಗಳ ಪ್ರಾರಂಭಕ್ಕೆ ಪ್ರಸ್ತಾವನೆ ಸಲ್ಲಿಕೆ
## ರಾಜ್ಯದಲ್ಲಿ ಯುಪಿಐ ಸೇವೆ ಪ್ರಾರಂಭಿಸಿದ ಮೊದಲ ಡಿಸಿಸಿಬ್ಯಾಂಕ್ ಎಂಬ ಹೆಗ್ಗಳಿಕೆಗೆ ಪಾತ್ರ



**ಹಂಪಿ ಟೈಮ್ಸ್ ಹೊಸಪೇಟೆ**

ಶತಮಾನ ಪೂರೈಸಿದ ಹೊಸಪೇಟೆಯ ಬಳ್ಳಾರಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ. ರೈತ್ನಸ್ನೇಹಿಯಾಗಿದ್ದು, ಕಳೆದ 48 ವರ್ಷಗಳಿಂದ ಲಾಭದಾಯಕವಾಗಿ ಮುನ್ನಡೆಯುತ್ತಾ ಬಂದಿದೆ. 2023-24ನೇ ಸಾಲಿನಲ್ಲಿ ರೂ.12.53 ಕೋಟಿ ರೂ. ಲಾಭ ಗಳಿಸಿದೆ. ಬ್ಯಾಂಕ್ ಸದೃಢ ಮತ್ತು ಸಶಕ್ತವಾಗಿದೆ ಎಂದು ನಬಾರ್ಡ್ ಪರಿಗಣಿಸಿ ಬ್ಯಾಂಕಿಗೆ 'ಎ' ಶ್ರೇಣಿ ನೀಡಿದೆ ಎಂದು ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಕೆ.ತಿಪ್ಪೇಸ್ವಾಮಿ ತಿಳಿಸಿದರು.

ನಗರದ ಶ್ರೀ ವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ ಶನಿವಾರ ಜರುಗಿದ ಬ್ಯಾಂಕಿನ 102ನೇ ಸರ್ವಸದಸ್ಯರ ಸಾಮಾನ್ಯ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ರಾಜ್ಯದ 21 ಡಿಸಿಸಿ ಬ್ಯಾಂಕುಗಳ ಪೈಕಿ ಯುಪಿಐ ಸೇವೆ ಪ್ರಾರಂಭಿಸಿದ ಮೊದಲ ಡಿಸಿಸಿ ಬ್ಯಾಂಕ್ ಎಂಬ ಹೆಗ್ಗಳಿಕೆಗೆ ಹೊಸಪೇಟೆಯ ಬಿಡಿಸಿಸಿ ಬ್ಯಾಂಕ್ ಪಾತ್ರವಾಗಿದೆ. ಬ್ಯಾಂಕ್ 650 ಸಹಕಾರಿಗಳ ಸದಸ್ಯತ್ವ ಹೊಂದಿದೆ. ರೂ.127.86 ಕೋಟಿ ಷೇರು ಬಂಡವಾಳ, ರೂ.158.62 ಕೋಟಿ ಕಾಯ್ದಿಟ್ಟ ನಿಧಿ ಸೇರಿದಂತೆ ರೂ.286.49 ಕೋಟಿ ಸ್ವಂತ ಬಂಡವಾಳ ಹೊಂದಿದೆ. ಆರ್‌ಬಿಐ ಪ್ರಕಾರ ಸಿಆರ್‌ಎಆರ್ ಶೇ.9ಕ್ಕಿಂತ ಹೆಚ್ಚು ಇರಬೇಕೆಂದಿದ್ದು, ಬ್ಯಾಂಕಿನ ಸಿಆರ್‌ಎಆರ್ ಶೇ.12.80 ಹೊಂದಿದ್ದು, ಸುಸ್ಥಿರ ಬಂಡವಾಳ ಪ್ರಮಾಣ ಹೊಂದಿರುತ್ತದೆ.

ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯ 11 ತಾಲೂಕುಗಳ ಕಾರ್ಯವ್ಯಾಪ್ತಿಯಲ್ಲಿ 33 ಶಾಖೆಗಳನ್ನು ಹೊಂದಿದ್ದು, 291 ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ. ನಿರ್ದೇಶಕರ ಮತ್ತು ಸಹಕಾರಿಗಳ ಸಹಕಾರ, ಸಿಬ್ಬಂದಿಗಳ ಪರಿಶ್ರಮ ಹಾಗೂ ಸಾಲಗಾರರು ಸಕಾಲದೊಳಗೆ ಸಾಲ ಮರುಪಾವತಿ ಮಾಡುತ್ತಿರುವುದರಿಂದಾಗಿ ಬ್ಯಾಂಕ್ ಪ್ರಗತಿಪಥದಲ್ಲಿ ಮುನ್ನಡೆಯುತ್ತಿದೆ.

**ಠೇವಣಿ ಸಂಗ್ರಹ:** ಸಹಕಾರ ಸಂಘಗಳಿಂದ 257.19 ಕೋಟಿ ರೂ ಠೇವಣಿ ಮತ್ತು ವ್ಯಕ್ತಿಗತ ಠೇವಣಿ 1306.71 ಕೋಟಿ ರೂ ಸಏರಿದಂತೆ ಒಟ್ಟು 1563.90 ಕೋಟಿ ರೂ ಠೇವಣಿ ಹೊಂದಿದೆ.

**ಹೂಡಿಕೆಗಳು:** ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಗಳನ್ನು ಪಾಲಿಸಲಾಗುತ್ತಿದ್ದು, ಸರ್ಕಾರದ ಭದ್ರತೆಗಳಲ್ಲಿ ರೂ.272.84 ಕೋಟಿ ಎಸ್ ಎಲ್ ಆರ್ ಹೂಡಿಕೆಗಳು ಸೇರಿದಂತೆ ಅಪೆಕ್ಸ್ ಬ್ಯಾಂಕ್ ಮತ್ತು ಇತರೆ ವಾಣಿಜ್ಯ ಬ್ಯಾಂಕ್‌ಗಳಲ್ಲಿ ಒಟ್ಟೂ ರೂ.643.05 ಕೋಟಿ ರೂಗಳನ್ನು ಹೂಡಿಕೆ ಮಾಡುವುದರ ಮೂಲಕ ಠೇವಣಿದಾರರ ಹಿತ ಕಾಪಾಡಿಕೊಂಡು ಸಾಕಷ್ಟು ಆರ್ಥಿಕ ಸದೃಢತೆಯನ್ನು ಹೊಂದಿರುತ್ತದೆ.

**ಸಾಲ ಮತ್ತು ಮುಂಗಡ:** ಜಿಲ್ಲೆಯ 1,15,365 ರೈತರಿಗೆ ಶೂನ್ಯ ಬಡ್ಡಿ ದರದ ಕೆ.ಸಿ.ಸಿ. ಸಾಲ ರೂ.1074.08 ಕೋಟಿ. ಮತ್ತು ಶೇ.3 ಬಡ್ಡಿದರದಲ್ಲಿ ಟ್ರ್ಯಾಕ್ಟರ್, ಪೈಪ್‌ಲೈನ್, ಭೂಅಭಿವೃದ್ಧಿ ಮತ್ತು ಹೈನುಗಾರಿಕೆಗೆ ರೂ.65.62 ಕೋಟಿ ಸಾಲ ನೀಡಲಾಗಿದೆ. ಕೃಷಿ ಸಾಲದ ಪ್ರಮಾಣ ಶೇ.66 ರಷ್ಟಿದ್ದು, ಕೃಷಿಯೇತರ ಸಾಲ ಶೇ.34ರಷ್ಟಿದೆ. ನಬಾರ್ಡ್ ಸೂಚನೆಯಂತೆ ಕೃಷಿ ಮತ್ತು ಕೃಷಿಯೇತರ ಸಾಲವನ್ನು ಶೇ.50:50 ಇರುವಂತೆ ಕ್ರಮವಹಿಸಲಾಗುವುದು.

**ಸಾಲ ವಸೂತಿ & ಎನ್‌ಪಿಎ ನಿರ್ವಹಣೆ:** ಬ್ಯಾಂಕಿನಿಂದ ನೀಡಿದ ಸಾಲಗಳು ಸುಸ್ತಿಯಾಗದಂತೆ ಹಾಗೂ ಎನ್‌ಪಿಎ ಆಗದಂತೆ ತೀವ್ರ ನಿಗಾವಹಿಸಲಾಗುತ್ತಿದೆ. ಸಾಲ ವಸೂಲಾತಿ ಶೇ.94.56 ರಷ್ಟಿರುತ್ತದೆ. ಆರ್‌ಬಿಐ ನಿಯಮಗಳ ಪ್ರಕಾರ ಸಿಆರ್‌ಎಆರ್ ಶೇ.9 ಇರಬೇಕಿದ್ದು, ಪ್ರಸ್ತುತ ಶೇ.12.80 ರಷ್ಟಿದ್ದು ಬ್ಯಾಂಕ್ ಸಧೃಡತೆಯನ್ನು ಖಚಿತಪಡಿಸಿದೆ. ಸಾಲದ ಮುಂಗಡಗಳ ನಿರ್ವಹಣೆಯೂ ಉತ್ತಮವಾಗಿದೆ.

**ಬ್ಯಾಂಕಿನ ಸೇವೆಗಳು:** ಎರಡು ಮೊಬೈಲ್ ವ್ಯಾನ್‌ಗಳ ಮೂಲಕ ಗ್ರಾಮೀಣ ಭಾಗದ ಗ್ರಾಹಕರಿಗೂ ಸೇವೆ ನೀಡಲಾಗುತ್ತಿದೆ. ಡಿಜಿಟಲ್ ಬಾಂಕಿಂಗ್ ಬಳಕೆ ಮತ್ತು ಉಪಯೋಗದ ಕುರಿತು ಎಚ್ಚರಿಕೆ ಕ್ರಮಗಳ ಅನುಸರಿಸುವ ಕುರಿತು 800 ತರಬೇತಿ ಕಾರ್ಯಾಗಾರ ನಡೆಸಲಾಗಿದೆ. ರಾಜ್ಯದಲ್ಲಿಯೇ ಮಾದರಿಯಾದ ಆನ್‌ಲೈನ್ ಡ್ರಾಯಲ್ ವ್ಯವಸ್ಥೆಯ ಜಾರಿಗೊಳಿಸಲಾಗಿದೆ. ಇದರಿಂದ ರೈತರ ಉಳಿತಾಯ ಖಾತೆಗೆ ಕೆಸಿಸಿ ಸಾಲದ ಮೊತ್ತ ಜಮಾ ಆಗುತ್ತಿದೆ. 4624 ಸ್ವಸಹಾಯ ಗುಂಪುಗಳನ್ನು ರಚಿಸುವುದರ ಮೂಲಕ ಗ್ರಾಮೀಣ ಜನರಲ್ಲಿ ಉಳಿತಾಯ ಮನೋಭಾವನೆ ಬೆಳೆಸಲಾಗುತ್ತಿದೆ.

**ಭವಿಷ್ಯದ ಯೋಜನೆಗಳು:** ರೂ.10 ಲಕ್ಷಗಳವರೆಗೆ ಬ್ಯಾಂಕಿನ ಮೂಲಕ ನೇರವಾಗಿ ರೈತರಿಗೆ ಸ್ವಾಭಿಮಾನಿ ಕಿಸಾನ್ ಕ್ರೆಡಿಟ್ ಸಾಲ ನೀಡುವುದು., ಎಲ್ಲಾ ಪ್ರಾ. ಕೃ.ಪ.ಸಹಕಾರ ಸಂಘಗಳನ್ನು ಗಣಕೀಕರಣಗೊಳಿಸಿ, ಆನ್‌ಲೈನ್ ಮೂಲಕ ಕೆಸಿಸಿ ಸಾಲ ನೀಡುವುದು., ಅವಳಿ ಜಿಲ್ಲೆಗಳಲ್ಲಿ 14 ಹೊಸ ಶಾಖೆಗಳನ್ನು ಪ್ರಾರಂಭಿಸಲು ಆರ್‌ಬಿಐ ಪರವಾನಿಗೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ., ಬ್ಯಾಂಕಿನ ಶಾಖೆಗಳಿಲ್ಲದ ಪ್ರದೇಶಗಳಲ್ಲಿ ಆಫ್‌ಸೈಟ್ ಎಟಿಎಂ ಪ್ರಾರಂಭಿಸಲಾಗುವುದು ಎಂದು ತಿಳಿಸಿದರು.

ಉಪಾಧ್ಯಕ್ಷ ಐ.ದಾರುಕೇಶ್, ನಿರ್ದೇಶಕರಾದ ಲತಾ ಮಲ್ಲಿಕಾರ್ಜುನ, ಚೊಕ್ಕಬಸವನಗೌಡ, ಎಲ್.ಎಸ್. ಆನಂದ, ಚಿದಾನಂದ ಐಗೋಳ, ಪಿ.ಮೂಕಯ್ಯಸ್ವಾಮಿ, ವೈ.ಅಣ್ಣಪ್ಪ, ಬಿ.ನವೀನ್‌ಕುಮಾರರೆಡ್ಡಿ, ಹುಲುಗಪ್ಪ ನಾಯಕರ, ಜೆ.ಎಂ.ಶಿವಪ್ರಸಾದ್, ವಿ.ಆರ್.ಸಂದೀಪ್ ಸಿಂಗ್, ಪಿ.ವಿಶ್ವನಾಥ, ಸರ್ಕಾರದ ಪ್ರತಿನಿಧ ಟಿ.ಎಂ. ಚಂದ್ರಶೇಖರಯ್ಯ, ಸಹಕಾರ ಸಂಘಗಳ ಉಪನಿಬಂಧಕ ಬೇರುಂಡದಾರ ಎ.ಕೇಸರಿಮಠ ಇತರರು ಇದ್ದರು.



## ಮೈಕ್ರೋ ನ್ಯೂಸ್

### ಶಿಕ್ಷಕರ ದಿನಾಚರಣೆ ಹಬ್ಬದಂತೆ ಆಚರಿಸಿ ಶಾಸಕ ಕೆ.ನೇಮಿರಾಜ್ ನಾಯ್ಕ್ ಹೇಳಿಕೆ

**ಹಂಪಿ ಟೈಮ್ಸ್, ಹಗರಿಬೊಮ್ಮನಹಳ್ಳಿ:**
ಡಾ.ಸರ್ವಪಲ್ಲಿ ರಾಧಕೃಷ್ಣನ್‌ರವರ ಜಯಂತ್ಯೋತ್ಸವವು ಅರ್ಥಪೂರ್ಣವಾಗಿ ಮತ್ತು ಹಬ್ಬದಂತೆ ಆಚರಿಸಲು ಶಾಸಕ ಕೆ.ನೇಮಿರಾಜ್‌ನಾಯ್ಕ್ ಕರೆ ನೀಡಿದರು.

ಪಟ್ಟಣದ ತಾ.ಪಂ.ಯ ಮಹಾತ್ಮಗಾಂಧಿ ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಸಮಿತಿಯಿಂದ ಜರುಗಿದ ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಂಡು ಅವರು ಕಾರ್ಯಕ್ರಮ ನಿರ್ವಹಣೆಯ ರೂಪರೇಷಗಳಿಗೆ ಮಾರ್ಗದರ್ಶನ ನೀಡಿ, ನಿರ್ವಹಣೆಯ ಜವಬ್ದಾರಿಯನ್ನು ಕೂಡ ಸಭೆಯಲ್ಲಿಯೇ ವಹಿಸಿ ಅವರು ಮಾತನಾಡಿದರು. ಕಳೆದ ವರ್ಷ ಶಿಷ್ಟಚಾರವನ್ನು ಉಲ್ಲಂಘಿಸಿ, ಆಹ್ವಾನ ಪತ್ರಿಕೆ ಮುದ್ರಾಣದಲ್ಲೂ ಅನೇಕ ತೊಂದರೆಗಳನ್ನು ಸಮಿತಿಯುವರು ಅನುಭವಿಸಿದ್ದೀರಿ. ಈ ಬಾರಿ ಅಂತಹ ತಪ್ಪುಗಳನ್ನು ಮಾಡದೆ, ಕಾರ್ಯಕ್ರಮ ಅದ್ದೂರಿಯಾಗಿ ಆಚರಿಸಿರಿ ಎಂದು ತಿಳಿಸಿದರು.

ನಂದಿಪುರದ ಡಾ.ಮಹೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸಿ, ಬಹುತೇಕ ಉತ್ತರ ಕರ್ನಾಟಕದಲ್ಲಿಯೇ ನಮ್ಮ ತಾಲೂಕಿನ ತಾಲೂಕು ಆಡಳಿತ, ಶಿಕ್ಷಣ ಇಲಾಖೆ ಮತ್ತು ಅವರೊಂದಿಗೆ ನಾನಾ ಸಂಘಟನೆಗಳು ಶಿಕ್ಷಕರ ದಿನಾಚರಣೆಯನ್ನು ಮೊದಲಿನಿಂದಲೂ ಅದ್ದೂರಿಯಾಗಿಯೇ ಆಚರಿಸುತ್ತಾ ಬಂದಿದ್ದಾರೆ. ಆದರೆ, ಬೆಳಗ್ಗೆ ಆರಂಭವಾಗುವ ಕಾರ್ಯಕ್ರಮ ಮದ್ಯಾಹ್ನಕ್ಕೆ ಪ್ರಾರಂಭವಾಗಿ ವೇದಿಕೆ ಎನ್ನುವುದು ಮಾರುಕಟ್ಟೆಯ ಸಂತೆಯಂತಾಗಿರುತ್ತೆ. ಅಶಿಸ್ತಿನಿಂದ ಕೂಡಿರುತ್ತೆ. ಭಾಷಣಕಾರರು ಸಮಯ ಮೀರಿ ಮಾತನಾಡುತ್ತಾರೆ. ನಿರೂಪಕರು ವೇದಿಕೆಯ ಹಿಡಿತ ತಪ್ಪುತ್ತಾರೆ ಎಂದು ಆಯೋಜಕರೆಲ್ಲರಿಗೂ ಚಾಟಿ ಏಟು ಬೀಸಿದರು. ನಡೆಯುವ ಕಾರ್ಯಕ್ರಮ ಒಂದು ಮಾದರಿಯಾಗಲಿ ಎಂದರಲ್ಲದೆ, ಕಾರ್ಯಕ್ರಮ ಅಚ್ಚುಕಟ್ಟಾಗಿ ಮಾಡುವುದು ನಮ್ಮ ಜಿಲ್ಲೆಯವರಾದ ಮಾಜಿ ಉಪಮುಖ್ಯಮಂತ್ರಿ ದಿ.ಎಂ.ಪಿ.ಪ್ರಕಾಶ್‌ರವರನ್ನು ನೋಡಿ ಕಲಿಯಬೇಕಾಗಿತ್ತು ಎಂದು ಸ್ಮರಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಮೈಲೇಶ್ ಬೇವೂರ್ ಮಾತನಾಡಿದರು. ಈ ವೇಳೆ ತಾ.ಪಂ.ಇಒ ಡಾ.ಪರಮೇಶ್ವರಪ್ಪ, ಉಪ ತಹಸೀಲ್ದಾರ್ ಜಿ.ಶಿವಕುಮಾರ್‌ಗೌಡ, ಬಿ.ಆರ್.ಸಿ ಪ್ರಭಾಕರ, ಬಿಸಿಯೂಟ ಅಧಿಕಾರಿ ರವಿನಾಯ್ಕ್, ಶಿಕ್ಷಕರ ಸಂಘದ ಅಧ್ಯಕ್ಷ ಹ್ಯಾಟಿ ಲೋಕಪ್ಪ, ನೌಕರರ ಸಂಘದ ಅಧ್ಯಕ್ಷ ಎಂ.ಪಿ.ಎಂ.ಮಂಜುನಾಥ, ಪ್ರಮುಖರಾದ ರವಿಚಂದ್ರನಾಯ್ಕ್, ಟಿ.ಸೋಮಶೇಖರ್, ಸೋಮನಗೌಡ, ಇಟಿಗಿ ಮಂಜುನಾಥ, ಕೆ.ಬಿ.ದೀಪಿಕಾ, ಇಟಿಗಿ ಪ್ರಭಾಕರ, ಯಂಕಾರೆಡ್ಡಿ, ಕೊಟ್ರೇಶ್ ಶೆಟ್ಟರ್, ಶಂಭುಲಿಂಗಪ್ಪ, ಉಮೇಶ್ ಜಜ್ಜೂರಿ, ಆಂಜನೇಯ, ವೀರನಗೌಡ, ಕೃಷಿ ಇಲಾಖೆಯ ಅಧಿಕಾರಿ ಸುನಿಲ್‌ನಾಯ್ಕ್ ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳಿದ್ದರು.

### ಶ್ರೀ ಹನುಮಂತದೇವರ ದೇವಾಲಯಗಳಲ್ಲಿ ಶ್ರಾವಣ ಪೂಜೆ

**ಹಂಪಿ ಟೈಮ್ಸ್ ಬಳ್ಳಾರಿ:**
ಶ್ರಾವಣಮಾಸ ಮೂರನೇ ಶನಿವಾರ ಹಿನ್ನೆಲೆ ನಗರ ಸೇರಿದಂತೆ ಜಿಲ್ಲೆಯ ಶ್ರೀ ಹನುಮಂತದೇವರ ದೇವಾಲಯದಲ್ಲಿ ಬೆಳಿಗ್ಗೆ ವಿಶೇಷ ಪೂಜೆ, ಶ್ರೀ ಹನುಮಾನ ಚಾಲಿಸಾ ಮಂತ್ರ ಪಠಣ, ಶ್ರೀ ಹರಿವಾಯುಸ್ತುತಿ ಮಂತ್ರ ಪಠಣೆ, ವಾಯುದೇವರಿಗೆ ವಿಶೇಷ ಅಲಂಕಾರ, ಮಹನ್ಯವೇದ್ಯ, ಮಹಾ ಮಂಗಳಾರತಿ ಸೇರಿದಂತೆ ವಿವಿಧ ಪೂಜೆಗಳು ನಡೆದವು.

**ವಿಶೇಷ ಪೂಜೆ:** ಶ್ರಾವಣ ಮಾಸದ ಮೂರನೇ ಶನಿವಾರ ಹಿನ್ನೆಲೆ, ನಾಡಿನ ಸಮಸ್ತ ನಾಗರಿಕರ ಒಳಿತಿಗಾಗಿ ಬಳ್ಳಾರಿ ನಗರ ಮಾಜಿ ಶಾಸಕ ಜಿ.ಸೋಮಶೇಖರ ರೆಡ್ಡಿ ಅವರು ಪ್ರಯಾಣ ಬೆಳೆಸಿ, ಬ್ರಹ್ಮಣಿ ಮುಹೂರ್ತದಲ್ಲಿ ಸಮೀಪದ ಮುರಡಿ, ನೇಮಕಲ್ಲು, ಹಾಗೂ ಕಸಾಪುರ ಶ್ರೀ ಆಂಜನೇಯ ಸ್ವಾಮಿ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು. ಬಳ್ಳಾರಿ ಸೇರಿದಂತೆ ನಾಡಿನಾದ್ಯಂತ ಉತ್ತಮ ಮಳೆ, ಬೆಳೆ ಸಮೃದ್ಧಿಯಾಗಿ ಬರಲಿ, ಜನರಿಗೆ ಆರೋಗ್ಯ ಆವಿಷ್ಯ, ಸಂಪತ್ತುನ್ನು ದೇವರು ಹೆಚ್ಚಿಸಲಿ, ಪ್ರತಿಯೊಬ್ಬರ ಬಾಳಲ್ಲಿ ನೆಮ್ಮದಿ ಸಿಗಲೆಂದು ಪ್ರಾರ್ಥಿಸಿದರು. ತಮ್ಮ ಅಪಾರ ಬೆಂಬಲಿಗರೊಂದಿಗೆ ಮೂರು ಆಂಜನೇಯ ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಸದಸ್ಯ ಶ್ರೀನಿವಾಸ ಮೊತ್ಕರ್ ಸೇರಿದಂತೆ ಇತರರು ಇದ್ದರು.

# ವಿಕಲಚೇತನರ ಸ್ವಾವಲಂಬಿ ಜೀವನಕ್ಕೆ ಜೈಪುರ ಕೃತಕ ಕಾಲು ಸಹಕಾರಿ: ಡಿಸಿ

## ಎಂಎಸ್‌ಪಿಎಲ್ ಸಂಸ್ಥೆ ಕಾರ್ಯ ಶ್ಲಾಘನೀಯ | ಉಚಿತ ಕೃತಕ ಕಾಲು ಜೋಡಣೆ ಶಿಬಿರ ಉದ್ಘಾಟನೆ



**ಹಂಪಿ ಟೈಮ್ಸ್ ಹೊಸಪೇಟೆ**

ಎಂಎಸ್‌ಪಿಎಲ್ ಸಂಸ್ಥೆಯು ಸಿಎಸ್‌ಆರ್ ಕಡ್ಡಾಯ ವಾಗುವ ಮುನ್ನವೇ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿದೆ. ವಿಜಯನಗರ ಜಿಲ್ಲೆಯ ಆಯ್ದ ಹಳ್ಳಿಗಳ ಸರ್ವತೋಮುಖ ಅಭಿವೃದ್ಧಿಗೆ ಸಹಕರಿಸುವುದರ ಜೊತೆಗೆ ಜೈಪುರ ಕೃತಕ ಕಾಲು ಶಿಬಿರ ಆಯೋಜಿಸಿ, ಅಂಗವಿಕಲರ ಸ್ವಾವಲಂಬಿ ಜೀವನಕ್ಕೆ ಸಹಕಾರಿಯಾಗಿರುವುದು ಶ್ಲಾಘನೀಯ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿದರು.

ನಗರದ ಸಹಕಾರಿ ಕಲ್ಯಾಣ ಮಂಟಪದಲ್ಲಿ ಎಂಎಸ್‌ಪಿಎಲ್ ಸಂಸ್ಥೆಯು ಭಗವಾನ್ ಮಹಾವೀರ ವಿಕಲಾಂಗ ಸಹಾಯತಾ ಸಮಿತಿ ಜೈಪುರ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ ಕೃತಕ ಕಾಲು ಜೋಡಣಾ ಶಿಬಿರ ಉದ್ಘಾಟಿಸಿ ಶನಿವಾರ ಮಾತನಾಡಿದರು. ಆಕಸ್ಮಿಕ ಹಾಗೂ ನಾನಾಕಾರಣಗಳಿಂದ ಕಾಲು ಕಳೆದುಕೊಂಡವರು ಎದೆಗುಂದಬೇಕಿಲ್ಲ. ಇಂತಹ ಶಿಬಿರಗಳ ಸದುಪಯೋಗಪಡೆದುಕೊಂಡು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಬೇಕು. ಎರಡು ಕಾಲು, ಕೈ ಇಲ್ಲದವರು ಜಗತ್ತೇ ತಿರುಗು ನೋಡುವಂತೆ ಸಾಧನೆ ಮಾಡಿದವರಿದ್ದಾರೆ. ಅವರುಗಳನ್ನು ನೋಡಿ ಆತ್ಮವಿಶ್ವಾಸ ಹೆಚ್ಚಿಸಿಕೊಳ್ಳಬೇಕು ಎಂದರು.

ಸಂಸ್ಥೆಯ ಚಿತ್ರದೇವಿ ಎನ್ ಬಲ್ಡೋಟ ಅವರು ಮಾತನಾಡಿ, ಎಂ ಎಸ್ ಪಿ ಎಲ್ ಸಂಸ್ಥೆಯು, ಸಿಎಸ್‌ಆರ್ ಕಾರ್ಯಕ್ರಮದ ಭಾಗವಾಗಿ, ಆರೋಗ್ಯ, ಶಿಕ್ಷಣದ ಅಭಿವೃದ್ಧಿ, ಯುವಕರಿಗೆ ಕೌಶಲ್ಯ ತರಬೇತಿ, ಸ್ವಸಹಾಯ ಗುಂಪುಗಳ ಮೂಲಕ ಮಹಿಳಾ ಸಬಲೀಕರಣ, ಪರಿಸರ ಸುಸ್ಥಿರತೆ, ಕಲೆ ಮತ್ತು ಸಂಸ್ಕೃತಿ, ಗ್ರಾಮೀಣ ಕ್ರೀಡೆಗಳ ಉತ್ತೇಜನ ಮುಂತಾದ ಸಾಮಾಜಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಆಯ್ದ 20 ಹಳ್ಳಿಗಳಲ್ಲಿ ಕೈಗೊಳ್ಳುತ್ತಿದ್ದು, ಕಳೆದ 10 ವರ್ಷಗಳಲ್ಲಿ ಆಯೋಜಿಸಿದ್ದ ಜೈಪುರ್ ಕೃತಕ ಕಾಲು ಜೋಡಣೆ ಶಿಬಿರದಲ್ಲಿ ಸುಮಾರು 2,500 ಕ್ಕೂ ಹೆಚ್ಚು ಜನರು ಪ್ರಯೋಜನ ಪಡೆದಿದ್ದಾರೆ ಎಂದರು.

ಮೊದಲ ದಿನದ 92 ಜನರು ಫಲಾನುಭವಿಗಳು ಪ್ರಯೋಜನ ಪಡೆದಿದ್ದಾರೆ. 71 ಜನ ಕೃತಕ ಕಾಲು, 16 ಜನ ಕ್ಯಾಲಿಪರ್, 2 ಜನ ಕೃತಕ ಕೈ ಹಾಗೂ 3 ಜನರು ಊರುಗೋಲುಗಳನ್ನು ಪಡೆದರು.

ಎಂಎಸ್‌ಪಿಎಲ್ ಸಂಸ್ಥೆ ಪ್ರತಿ ವರ್ಷ ಶಿಬಿರ ಆಯೋಜಿಸುತ್ತಿರುವುದರಿಂದ ಅನೇಕ ವಿಕಲಚೇತನರಿಗೆ ಆರ್ಥಿಕ ಹೊರೆ ತಗ್ಗಿಸುವುದರ ಜೊತೆಗೆ ಸ್ವಾವಲಂಬಿಗಳಾಗಿ ಜೀವನದಲ್ಲಿ ಎಲ್ಲರಂತೆ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದಕ್ಕೆ ಅನುಕೂಲವಾಗಿದೆ. ನಮ್ಮ ದೈನಂದಿನ ಕಾರ್ಯಗಳಿಗೆ ಯಾರನ್ನೂ ಅವಲಂಬಿಸದಂತಾಗಿದೆ. ನಮಗಿಷ್ಟವಾದ ಸ್ಥಳಗಳಿಗೆ ಹೋಗಿಬರಲು, ವ್ಯಾಪಾರವಹಿವಾಟು ಮಾಡಲು ತುಂಬ ಅನುಕೂಲವಾಗಿದೆ ಎಂದು ಸುಮಲತಾ, ಶಾಂತನಗೌಡ್ರು, ಮತ್ತು ಶ್ರೀಪ್ರಿಯ ಇತರರು ಅಭಿಪ್ರಾಯ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಭಗವಾನ್ ಮಹಾವೀರ ವಿಕಲಾಂಗ ಸಹಾಯತಾ ಸಮಿತಿಯ ಅನಿಲ್ ಸುರಾನ ಮತ್ತು ಬಲ್ಡೋಟ ಸಮೂಹದ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಡಾ ನರೇಂದ್ರಕುಮಾರ್ ಎ ಬಲ್ಡೋಟ ರವರು ಉಪಸ್ಥಿತರಿದ್ದರು. ಈ ಶಿಬಿರವು ಭಾನುವಾರ ಮತ್ತು ಸೋಮವಾರವೂ ನಡೆಯಲಿದ್ದು ಹೆಚ್ಚಿನ ಫಲಾನುಭವಿಗಳು ಪ್ರಯೋಜನ ಪಡೆಯ ಬಹುದು.

# ಶೂ ಸಾಕ್ಸ್ ವಿತರಣೆ

**ಹಂಪಿ ಟೈಮ್ಸ್ ಬಳ್ಳಾರಿ**

ಮಹಾನಗರ ಪಾಲಿಕೆ 36ನೇ ವಾರ್ಡ್ ವ್ಯಾಪ್ತಿಯ ಲಾಲ್ ಬಹದ್ದೂರ್ ಶಾಸ್ತ್ರಿ ನಗರದ ಸರ್ಕಾರಿ ಶಾಲೆಯಲ್ಲಿ ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಯ ವತಿಯಿಂದ 2024- 25ನೇ ಸಾಲಿನ ಶೂ ಮತ್ತು ಸಾಕ್ಸ್ ಗಳನ್ನು ವಿತರಿಸಲಾಯಿತು, ಈ ಸಂದರ್ಭದಲ್ಲಿ ಎಸ್ ಡಿಎಂಸಿ ಅಧ್ಯಕ್ಷ ಜೆ.ವಿ. ಮಂಜುನಾಥ ಉಪಾಧ್ಯಕ್ಷೆ ಸುಜಾತ ಹಾಗೂ ಕಾರ್ಯದರ್ಶಿಗಳು ಮತ್ತು ಶಾಲೆಯ ಪ್ರಭಾರಿ ಮುಖ್ಯಗುರು ಟಿ. ರಾಜಶೇಖರ್, ಸಮಾಜ ಸೇವಕ ಶಾಂತಿಧರ ದರಪ್ಪ, ದಾಸಪುರ ಅರುಣ್ ಕುಮಾರ್ ಇತರರಿದ್ದರು.


HAMPI TIMES
Print & Digital Ads
Book @ Economical rates
Hosapete-Vijayanagara Dist.

ನಂ.1 ನೆಚ್ಚಿನ ದಿನಪತ್ರಿಕೆ
ಹಂಪಿ ಟೈಮ್ಸ್
ದಿನಪತ್ರಿಕೆಯಲ್ಲಿ ಜಾಹೀರಾತು ನೀಡಿ ಅತ್ಯಧಿಕ ಓದುಗರನ್ನು ತಲುಪಿ
ಲೋಕಲ್ ಜಾಹೀರಾತು ಈಗ ವಿಶ್ವವ್ಯಾಪಿ

- Recruitment job
- Tender/Notice
- Change of name
- Matrimonial
- obituary (Death announcement)
- Businesses
- Education
- Property Real Estate
- Lost and found
- Marriage Bureau
- Remembrance
- Service
- Retail/shopping
- Personnel Announcement
- Computers and Hardware
- Astrology
- Loan /Finance
- Vehicle Automobiles
- Tours and Travels

Education is the most powerful weapon which you can use to change the world
- Nelson Mandela

M:94486 33038
Visit Us www.hampitimes.com/epaper.hampitimes.com

ನಮ್ಮ ಶಾಲೆ ನಮ್ಮ ದೇಗುಲ: ಸರ್ಕಾರಿ ಶಾಲೆಗಳು ಮಕ್ಕಳಲ್ಲಿ ಮಾನವೀಯ ಮೌಲ್ಯಗಳನ್ನು ತುಂಬುವ ಪವಿತ್ರ ಸ್ಥಳ, ಶಾಲೆಗಳ ಸ್ವಚ್ಛತೆ, ಸಂರಕ್ಷಣೆ ನಮ್ಮೆಲ್ಲರ ಹೊಣೆ. ಬನ್ನಿ ಕೈಜೋಡಿಸಿ...

ಹಂಪಿ ಟೈಮ್ಸ್
ಸಂ | ಪಾ | ದ | ಕೀ | ಯ

## ಸಮಾಧಾನವಷ್ಟೇ, ಸಂತೋಷವಲ್ಲ

ತುಂಗಭದ್ರಾ ಜಲಾಶಯದ ಇತಿಹಾಸದಲ್ಲೇ ನಡೆಯಬಾರದ ದುರ್ಘಟನೆ ಸಂಭವಿಸಿದೆ. ಆಗಸ್ಟ್ 10ರಂದು ಜಲಾಶಯದ 19ನೇ ಕ್ರಸ್ಟ್‌ಗೇಟ್ ಕೊಚ್ಚಿಹೋಗಿದ್ದು ಸಾಮಾನ್ಯವಿಷಯವಾಗಿ ಪರಿಗಣಿಸುವಂತಿಲ್ಲ. ತಂತ್ರಜ್ಞರು ಒಟ್ಟುಗೂಡಿ ವಾರದಲ್ಲೇ ಕ್ರಸ್ಟ್‌ಗೇಟ್ ಜಾಗದಲ್ಲಿ ಸ್ಟಾಪ್‌ಲಾಗ್ ಗೇಟ್‌ನ ಐದು ಎಲಿಮೆಂಟ್ ಅಳವಡಿಸುವ ಮೂಲಕ ತುಂಗಭದ್ರೆಯ ರಭಸವನ್ನು ತಡೆಹಿಡಿದಿದ್ದು ರೋಚಕ ಸಾಹಸವೇ ಸರಿ. ತಂತ್ರಜ್ಞರಿಗೆ ಈ ವಿಷಯದಲ್ಲಿ ನಾವೆಲ್ಲ ಹ್ಯಾಟ್ಸಾಫ್ ಹೇಳಲೇಬೇಕು. ಹರಿವ ನೀರನ್ನು ಗೇಟ್‌ಗಳ ಮೂಲಕ ತಡೆಹಿಡಿದಿರುವುದೇನೋ ಸಮಾಧಾನ ಸಂಗತಿ. ಆದರೆ, ಇಲ್ಲಿ ಸಂತೋಷ ಪಡುವ ಸ್ಥಿತಿಯಲ್ಲಿ ನಾವಿಲ್ಲ ಎಂಬುದು ನೆನಪಿಟ್ಟುಕೊಳ್ಳಬೇಕಿದೆ. ಮುಂದಿನ



ಬೇಸಿಗೆಯಲ್ಲಿ ಈಗ ಅಳವಡಿಸಿರುವ ಸ್ಟಾಪ್‌ಲಾಗ್ ಗೇಟ್‌ಗಳನ್ನು ಹೊರತೆಗೆದು, ಆ ಜಾಗದಲ್ಲಿ ಕ್ರಸ್ಟ್‌ಗೇಟ್ ಕೂಡಿಸಲೇಬೇಕು. ಈಗ ಹಾಕಿರುವ ಸ್ಟಾಪ್‌ಲಾಗ್ ಗೇಟ್‌ಗಳಿಂದ ನೀರನ್ನು ತಡೆಯಬಹುದೇ ವಿನಹ, ನೀರನ್ನು ಅಲ್ಲಿಂದ ಬಿಡಲು ಸಾಧ್ಯವಿಲ್ಲ. ಹೀಗಾಗಿ ನೀರು ಕಡಿಮೆಯಾದ ನಂತರ ಹೊಸ ಕ್ರಸ್ಟ್‌ಗೇಟ್ ಕೂಡಲೇಬೇಕು. ಮೊದಲೇ ಹೇಳಿದಂತೆ ಇದು ಸಂತೋಷ ಪಡುವ ಪರಿಸ್ಥಿತಿಯಲ್ಲಿ ನಾವಿಲ್ಲ. ಏಕೆಂದರೆ 70 ವರ್ಷ ಹಳೆಯದಾದ ಈ ಜಲಾಶಯದಲ್ಲಿ ಉಳಿದ ಕ್ರಸ್ಟ್‌ಗೇಟ್‌ಗಳು ಯಾವ ಸ್ಥಿತಿಯಲ್ಲಿವೆ ಎಂಬುದು ಯಾರಿಗೂ ಗೊತ್ತಿಲ್ಲ. ಅಧಿಕಾರಿಗಳು ಹೇಳುವ ಪ್ರಕಾರ ಪ್ರತಿವರ್ಷ ಮೆಂಟೇನೆನ್ಸ್ ನಡೆಯುತ್ತಿದ್ದರೂ ಕ್ರಸ್ಟ್‌ಗೇಟ್ ಕಿತ್ತುಹೋಗಿದ್ದು ಯಾಕೆ ಎಂಬ ಉತ್ತರ ಅವರಲ್ಲಿಲ್ಲ. ಹೀಗಾಗಿ ಉಳಿದ ಕ್ರಸ್ಟ್‌ಗೇಟ್‌ಗಳು ಹೇಗೆ ಸುಸ್ಥಿತಿಯಲ್ಲಿವೆ ಎಂಬ ಅನುಮಾನಗಳು ವ್ಯಕ್ತವಾಗಿವೆ. ಕರ್ನಾಟಕದಲ್ಲಿ ಎರಡನೇ ಅತಿದೊಡ್ಡ ಅಣೆಕಟ್ಟೆಯಾದ ಟಿಬಿ ಡ್ಯಾಂನಿಂದ ವಿಜಯನಗರ, ಬಳ್ಳಾರಿ, ಕೊಪ್ಪಳ, ರಾಯಚೂರು, ಆಂಧ್ರ, ತೆಲಂಗಾಣ ರಾಜ್ಯಗಳ ಅನ್ನದಾತರು ಜೀವನ ನಡೆಸುತ್ತಿದ್ದಾರೆ. ಆದರೆ, ಜಲಾಶಯ ಬಾಳಿಕೆ ಬರುವಂತೆ ಮಾಡಬೇಕಾದ ಅಧಿಕಾರಿಗಳು ಉದಾಸೀನ ತೋರಿದ್ದರಿಂದ ಒಂದು ಅವಘಡ ಸಂಭವಿಸಿದೆ. ಇದು ನಾವೆಲ್ಲ ಮುನ್ಸೂಚನೆ ಎಂದೇ ಭಾವಿಸಬೇಕು. ಭವಿಷ್ಯದಲ್ಲಿ ಇಂಥ ದುರ್ಘಟನೆಗಳು ಸಂಭವಿಸದಂತೆ ಈಗಿನಿಂದಲೇ ಸನ್ನದ್ಧರಾಗಬೇಕಿದೆ. ಅನುದಾನಕ್ಕೇನೂ ಕೊರತೆಯಿಲ್ಲ. ಕೂಡಲೇ ಅನುದಾನವನ್ನು ಬಳಸಿ ಪ್ರತಿ ಬೇಸಿಗೆಯಲ್ಲಿ ಕನಿಷ್ಠ ಪಕ್ಷ ಎಂಟತ್ತು ಕ್ರಸ್ಟ್‌ಗಳನ್ನಾದರೂ ಬದಲಿಸಬೇಕು. ಆ ಜಾಗಕ್ಕೆ ಹೊಸದನ್ನು ಕೂಡಿಸಬೇಕು. ಈಗ ನಡೆದಿರುವ ಅನಾಹತದ ಬಗ್ಗೆ ಮೊದಲೇ ಸುಳಿವಿದ್ದರೂ ಅಧಿಕಾರಿಗಳು ತಲೆಕೆಡಿಸಿಕೊಂಡಿಲ್ಲ. ಜಲಾಶಯದ ಆಯುಷ್ಯ 100 ವರ್ಷಗಳು ಎಂದು ಅದನ್ನು ಕಟ್ಟಿದವರು ಹೇಳಿದ್ದಾರೆ. ಈಗಾಗಲೇ ಜಲಾಶಯಕ್ಕೆ 70 ವರ್ಷಗಳು ತುಂಬಿವೆ. ಈ ಮೊದಲೇ, ಅಂದರೆ ಜಲಾಶಯ 50 ತುಂಬುವ ಹೊತ್ತಿನಲ್ಲೇ ಎಲ್ಲ ಕ್ರಸ್ಟ್‌ಗೇಟ್‌ಗಳನ್ನು ಬದಲಿಸಬೇಕೆಂಬ ನಿಯಮವಿದೆ. ಆದರೆ, ಇಪ್ಪತ್ತು ವರ್ಷಗಳ ನಂತರವೂ ಆ ಕಾರ್ಯ ನಡೆದಿಲ್ಲವೆಂದರೆ ಅನುಮಾನ ಮತ್ತು ಬೇಸರ ವ್ಯಕ್ತವಾಗುತ್ತದೆ. ಬರೀ ಕೃಷಿಗಲ್ಲ, ಕುಡಿವ ನೀರಿಗೂ ತುಂಗಭದ್ರೆ ನಮಗೆ ಆಸರೆ. ಕೋಟ್ಯಂತರ ಜನರ ಜೀವನಾಡಿಯಾಗಿರುವ ತುಂಗಭದ್ರ ಜಲಾಶಯವನ್ನು ಪ್ರೀತಿಯಿಂದ ಕಾಪಾಡಬೇಕಿದೆ. ಮುಂದಿನ ಮೂವತ್ತು ವರ್ಷಗಳಲ್ಲ, ಅದಕ್ಕಿಂತಲೂ ಹೆಚ್ಚು ಬಾಳಿಕೆ ಬರಬೇಕೆಂದರೆ ಕೂಡಲೇ ಒಂದೊಂದಾಗಿ ಕ್ರಸ್ಟ್‌ಗೇಟ್‌ಗಳನ್ನು ಬದಲಿಸಲೇಬೇಕು. ಈಗಾಗಿರುವ ಅನಾಹುತ ಎಚ್ಚರಿಕೆ ಗಂಟೆಯಾಗಿದೆ. ಮತ್ತೊಮ್ಮೆ ಮರುಕಳಿಸದಂತೆ ಎಚ್ಚರಿಕೆ ವಹಿಸಬೇಕಿದೆ.

## ನೀವೂ ಬರೆಯಬಹುದು

ಹಂಪಿ **ಟೈಮ್ಸ್** ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ವಿಜಯನಗರ ಅರಸರುಗಳ ಅರಮನೆಗಳ ಬಗ್ಗೆ ದೊರೆಯದ ಖಚಿತ ಮಾಹಿತಿ

**ಸುಮಾರು 229 ವರ್ಷಗಳ ಕಾಲ 21 ರಾಜರುಗಳು ವಿಜಯನಗರ ಸಾಮ್ರಾಜ್ಯ ಆಳಿದ್ದಾರೆ। ಪ್ರವಾಸಿಗರಿಗಿಲ್ಲ ದರ್ಶನ ಭಾಗ್ಯ ವಿಜಯನಗರದ ಚರಿತ್ರೆಯನ್ನು ಇದುವರೆಗೂ ಏಕೆ ಕಟ್ಟಿಕೊಡಲಾಗುತ್ತಿಲ್ಲ ಎನ್ನುವುದೇ ಈಗಿನ ಬಹುದೊಡ್ಡ ಪ್ರಶ್ನೆ**

ಮಧ್ಯಕಾಲೀನ ದಕ್ಷಿಣ ಭಾರತದ ಚರಿತ್ರೆಯಲ್ಲಿ ವಿಜಯನಗರ ಸಾಮ್ರಾಜ್ಯಕ್ಕೆ ಸಂದಿರುವ ಪ್ರಾಶಸ್ತ್ಯ ಗೌರವ ಅದ್ಭುತವಾದದ್ದು. ಇಡೀ ದಕ್ಷಿಣ ಭಾರತವನ್ನು ಹಾಗೂ ಉತ್ತರ ಭಾರತದ ಒರಿಸ್ಸಾವರೆಗೆ ಇತ್ತ ಶ್ರೀಲಂಕಾದವರಿಗೂ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿಕೊಂಡು ವಿಶಾಲವಾದ ಸಾಮ್ರಾಜ್ಯವನ್ನು ಆಳ್ವಿಕೆ ನಡೆಸಿದ ಕೀರ್ತಿ ಚರಿತ್ರೆ ವಿಜಯನಗರ ಸಾಮ್ರಾಜ್ಯಕ್ಕೆ ಇದೆ. ವಿಜಯನಗರ ಸಾಮ್ರಾಜ್ಯ 1336 ರಿಂದ 1565 ರವರೆಗೆ ತನ್ನ ಆಡಳಿತವನ್ನು ನಡೆಸಿದ ಬಗ್ಗೆ ನಾವು ಚರಿತ್ರೆಯನ್ನು ಗಮನಿಸಿದ್ದೇವೆ.. ಸಂಗಮ ವಂಶಸ್ಥರು 1336 ರಿಂದ1486 ರ ವರೆಗೆ ಸಾಳ್ವ ವಂಶಸ್ಥರು 1486 ರಿಂದ 1503 ರವರೆಗೆ ತುಳು ವಂಶಸ್ಥರು 1503 ರಿಂದ 1572ರ ವರೆಗೆ ಹಾಗೂ ಕೊನೆಯ ಅರವೀಡು ವಂಶಸ್ಥರು 1572 ರಿಂದ 1565 ರವರೆಗೆ ಆಳ್ವಿಕೆ ನಡೆಸಿದ ಬಗ್ಗೆ ಚರಿತ್ರೆಯನ್ನು ಚರಿತ್ರಕಾರರು ಕಟ್ಟಿಕೊಟ್ಟಿದ್ದಾರೆ. ಇವರುಗಳಲ್ಲಿ ಸಂಗಮ ವಂಶದ ಒಂದನೆ ಹರಿಹರ ಒಂದನೇ ಬುಕ್ಕರಾಯ ಇಮ್ಮಡಿ ಹರಿಹರ ಇಮ್ಮಡಿ ದೇವರಾಯ ಮತ್ತು ತುಳು ವಂಶದ ಶ್ರೀ ಕೃಷ್ಣದೇವರಾಯ ಅಚ್ಚುತದೇವರಾಯ ಇವರು ವಿಜಯನಗರ ಸಾಮ್ರಾಜ್ಯದ ಬೆಳವಣಿಗೆಯಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿದ್ದಾರೆ. ಸುಮಾರು 229 ವರ್ಷಗಳ ಕಾಲ 21 ರಾಜರುಗಳು ಈ ಸಾಮ್ರಾಜ್ಯವನ್ನು ನಿರಂತರವಾಗಿ ಮುನ್ನಡೆಸಿದ್ದಾರೆ. ಇದು ಕನ್ನಡ ನಾಡಿನ ಚರಿತ್ರೆಯಲ್ಲಿ ಅತ್ಯಂತ ಮಹತ್ವದ ಚರಿತ್ರೆಯಾಗಿದೆ.

ವಿಜಯನಗರ ಸಾಮ್ರಾಜ್ಯವನ್ನು ಕರ್ನಾಟಕ ಸಾಮ್ರಾಜ್ಯ ಎಂದು ಕರೆಯುವುದು ಹೆಚ್ಚು ಪ್ರಸ್ತುತ ಎಂದು ಕೆಲ ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ. ಅಂದರೆ ಕನ್ನಡದ ನೆಲ ಭಾಷೆ ಸಾಹಿತ್ಯ ಸಂಗೀತ ಸಂಸ್ಕೃತಿ ಕಲೆ ಇತ್ಯಾದಿಗಳ ಬಗ್ಗೆ ವಿಜಯನಗರ ಸಾಮ್ರಾಜ್ಯದಲ್ಲಿ ಸಿಕ್ಕಷ್ಟು ಪ್ರೋತ್ಸಾಹ ಬೆಂಬಲ ಮತ್ತಾವ ಸಾಮ್ರಾಜ್ಯದಲ್ಲಿಯು ಇಲ್ಲ. ಬರೀ ಸಾಮ್ರಾಜ್ಯವನ್ನು ಕಟ್ಟಿ ಆಳ್ವಿಕೆ ನಡೆಸುವುದು ಅಷ್ಟೇ ವಿಜಯನಗರದ ಅರಸರುಗಳ ಉದ್ದೇಶವಾಗಿರಲಿಲ್ಲ. ಏಕೆಂದರೆ ವಿಜಯನಗರ ಸಾಮ್ರಾಜ್ಯ ಸ್ಥಾಪಿಸಲ್ಪಟ್ಟಿದ್ದೇ ಅತ್ಯಂತ ಸಂದಿಗ್ದ ಪರಿಸ್ಥಿತಿಯಲ್ಲಿ. ಉತ್ತರ ಭಾರತದಲ್ಲಿ ಮೊಘಲರ ಆಕ್ರಮಣಗಳಿಂದ ಬೇಸತ್ತು ಹೋಗಿದ್ದ ಜನರಿಗೆ ದಕ್ಷಿಣದಲ್ಲಿ ಮೊಘಲರಿಗೆ ಪ್ರತ್ಯುತ್ತರವಾಗಿ ಪ್ರತಿಸ್ಪರ್ಧೆಯನ್ನು ನೀಡಿ ಅವರನ್ನು ದಕ್ಷಿಣ ಭಾರತದ ಕಡೆಗೆ ಬರದ ಹಾಗೆ ಮಾಡಿ ತಮ್ಮ ಸಾಮ್ರಾಜ್ಯವನ್ನು ಗಟ್ಟಿಗೊಳಿಸಿಕೊಂಡಿದ್ದರು. ಹೀಗಾಗಿ ವಿಜಯನಗರ ಸಾಮ್ರಾಜ್ಯದ ಚರಿತ್ರೆಗೆ ಚಾರಿತ್ರಿಕವಾದ ಮಹತ್ವವಿದೆ.

ವಿಜಯನಗರ ಸಾಮ್ರಾಜ್ಯದ ಮೊದಲ ಸಂಗಮ ವಂಶದ ಅರಸರು ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ತಳಪಾಯವನ್ನು ಹಾಕಿಕೊಟ್ಟವರು. ಇವರ ನಗರ ನಿರ್ಮಾಣದ ಕಲ್ಪನೆಯಲ್ಲಿ ಸಾಮ್ರಾಜ್ಯವು ಮುಂದೆ ಬಂದ ಎಲ್ಲಾ ಅರಸರು ಪ್ರೌಢದೇವರಾಯನಿಂದ ಕೃಷ್ಣದೇವರಾಯನವರಿಗೆ ಅದನ್ನು ಕಟ್ಟಿ ಬೆಳೆಸಿಕೊಂಡು ಬಂದವರು. ವಿಶೇಷವಾಗಿ ಪ್ರೌಢದೇವರಾಯನ ಕಾಲದಲ್ಲಿ ಕಲೆ ಸಾಹಿತ್ಯ ಸಂಗೀತ ವಚನ ಸಾಹಿತ್ಯಕ್ಕೆ ಅತ್ಯಂತ ಮಹತ್ವದ ಸ್ಥಾನವಿತ್ತು ಹೀಗಾಗಿಯೇ ನೂರೊಂದು ವಿರಕ್ತರು ಹಂಪಿಯಲ್ಲಿ ನೆಲೆ ನಿಂತವರು. ನೀರಾವರಿ ಯೋಜನೆಗಳನ್ನು ರೂಪಿಸುವ ಮೂಲಕ ರೈತರಿಗೆ ನೀರಾವರಿ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟರು.



**ಎಂ.ಎಂ.ಶಿವಪ್ರಕಾಶ**
**ಲೇಖಕರು: ಹೊಸಪೇಟೆ**
**ಮೊ: 9449654489**
Scan For Digital Colourful HAMPI TIMES E-paper

ವಿಜಯನಗರದ ಮಾರುಕಟ್ಟೆಯು ಕೇವಲ ಸ್ಥಳೀಯವಾಗಿ ಸೀಮಿತವಾಗಿರಲಿಲ್ಲ, ಅದು ವಿದೇಶಿ ವ್ಯಾಪಾರಸ್ಥರನ್ನು ಸಹ ತನ್ನ ಮಾರುಕಟ್ಟೆಗೆ ಆಕರ್ಷಿಸಿಕೊಂಡಿತು. ವಿದೇಶಿ ವ್ಯಾಪಾರಸ್ಥರು ಸಹ ಈ ಮಾರುಕಟ್ಟೆಯಲ್ಲಿ ಪಾಲ್ಗೊಳ್ಳುತ್ತಿದ್ದರು. ಜಗತ್ತಿನ ಯಾವುದಾದರು ಮುಕ್ತ ಮಾರುಕಟ್ಟೆಯಲ್ಲಿ ಮುತ್ತು ರತ್ನ ವಜ್ರಗಳನ್ನು ಮಾರಾಟ ಮಾಡಿದ ಮಾರುಕಟ್ಟೆಯ ಚರಿತ್ರೆ ಇದೆ ಎಂದರೆ ಅದು ವಿಜಯನಗರ ಸಾಮ್ರಾಜ್ಯಕ್ಕೆ ಮಾತ್ರ. ಆ ಕಾಲಘಟ್ಟದಲ್ಲಿ ಬಂದ ಪ್ರಸಿದ್ಧ ವಿದೇಶಿ ಪ್ರವಾಸಿಗರಾದ ಇಬ-ನೆ ಭತುತಾ, ನಿಕೊಲೋ-ದೆ-ಕೊಂತಿ, ಅಬ್ದುಲ್ ರಜಾಕ್, ಡೊಮಿಂಗೊ ಪ್ಯಾಸ್. ಮೊದಲಾದ ಪ್ರವಾಸಿಗರು ತಮ್ಮ ಪ್ರವಾಸ ಕಥನಗಳಲ್ಲಿ ವಿಜಯನಗರ ಚರಿತ್ರೆಯನ್ನು ದಾಖಲಿಸಿದ್ದಾರೆ. ಇವರುಗಳ ಈ ದಾಖಲಾತಿಗಳಿಂದಲೇ ವಿಜಯನಗರದ ಚರಿತ್ರೆಯನ್ನು ಅಕ್ಷರಸಹ ವಾಸ್ತವ ನೆಲಗಟ್ಟಿನಲ್ಲಿ ಚಿತ್ರಿಸಲಾಗಿದೆ.

ಅಬ್ದುಲ್ ರಜಾಕ್ ವಿಜಯನಗರದಂತ ನಗರವನ್ನು ನನ್ನ ಕಣ್ಣುಗಳು ಕಂಡಿಲ್ಲ ಕಿವಿ ಕೇಳಿಲ್ಲ ಎಂದು ವ್ಯವಸ್ಥಿತವಾದ ನಗರವನ್ನು ಕುರಿತು ಬರೆದಿದ್ದಾನೆ. ಇಂತಹ ನಗರ ನಿರ್ಮಾಣವನ್ನು ಮಧ್ಯಕಾಲೀನ





ಕಾಲ ಘಟ್ಟದಲ್ಲಿ ನಿರ್ಮಿಸಿದ ಕೀರ್ತಿ ವಿಜಯನಗರದ ಸಾಮ್ರಾಜ್ಯದ ಅರಸರುಗಳಿಗೆ ಸಲ್ಲುತ್ತದೆ.

ಈಗ ವಾಸ್ತವದಲ್ಲಿ ಹಂಪಿ ವಿಶ್ವ ಪರಂಪರೆ ತಾಣವಾಗಿ ಪ್ರವಾಸಿ ಕೇಂದ್ರವಾಗಿ ಜನರನ್ನು ಆಕರ್ಷಿಸುತ್ತಿದೆ. ಲಕ್ಷಾಂತರ ಜನ ಪ್ರವಾಸಿಗರು ಈಗ ಹಂಪಿಯನ್ನು ನೋಡಲು ವರ್ಷದುದ್ದಕ್ಕೂ ಆಗಮಿಸುತ್ತಿದ್ದಾರೆ ಹಾಗಾಗಿ ಹಂಪೆ ಈಗ ಹೆಚ್ಚು ಚರ್ಚೆಯಲ್ಲಿ ಪ್ರವಾಸಿಗರ ವೀಕ್ಷಣೆಯ ಸ್ಥಳವಾಗಿ ಮಾರ್ಪಟ್ಟಿದೆ. ಕೆಲ ದಶಕಗಳ ಹಿಂದೆ ಹಂಪಿಗೆ ಬರುವವರು ಹಂಪಿಯ ಅಧ್ಯಯನವನ್ನು ಮಾಡಿದವರು, ಹಂಪಿಯ ಬಗ್ಗೆ ಸಂಶೋಧನೆ ಮಾಡುವವರು ಹಾಗೂ ಚಾರಿತ್ರಿಕ ಸ್ಥಳಗಳ ಬಗ್ಗೆ ಆಸಕ್ತಿಯನ್ನು ಬೆಳೆಸಿಕೊಂಡವರು ಬಹುತೇಕವಾಗಿ ಹಂಪಿಗೆ ಬಂದು ಈ ಸ್ಥಳ ವೀಕ್ಷಿಸಿ ತಮ್ಮ ಅಧ್ಯಯನಗಳು ಕುರಿತು ದಾಖಲಿಸುತ್ತಿದ್ದರು. ಆದರೆ ಬದಲಾದ ಕಾಲಘಟ್ಟದಲ್ಲಿ ಅಂದರೆ ಸರ್ಕಾರಗಳು ಪ್ರವಾಸಿ ಸ್ಥಳಗಳನ್ನು ಉದ್ಯಮಗಳನ್ನಾಗಿ ಪರಿವರ್ತಿಸಿರುವುದರಿಂದ ಇವತ್ತು ಪ್ರವಾಸೋದ್ಯಮವು ತೀವ್ರಗತಿಯಲ್ಲಿ ಬೆಳೆಯುತ್ತಾ ಸರ್ಕಾರದ ಸುಸ್ಥಿರ ಆರ್ಥಿಕತೆಯ ಬೆಳವಣಿಗೆಗೆ ಕಾರಣವಾಗಿದೆ. ಹೀಗಾಗಿ ಇವತ್ತು ಜನಸಾಮಾನ್ಯರು ಹಂಪಿಯ ಬಗ್ಗೆ ಏನನ್ನು ಓದದೆ ಇದ್ದರು ಅವರು ಹಂಪಿಯ ಸುವರ್ಣಯುಗದ ಕಥೆಯನ್ನು ತಿಳಿದು ಹಂಪಿಯನ್ನು ನೋಡುವ ಕುತೂಹಲದಿಂದ ಇಡೀ ಹಂಪಿಯನ್ನು ಒಮ್ಮೆ ಸುತ್ತು ಹಾಕುತ್ತಿದ್ದಾರೆ.

ಸಾಮಾನ್ಯ ಪ್ರವಾಸಿಗರು ಹಂಪಿಯನ್ನು ಪಂಪ ವಿರೂಪಾಕ್ಷನ

ನಿರ್ಮಿಸಿರುವ ರಾಜರುಗಳು ತಾವು ಸಹ ಎಂತಹ ಅರಮನೆಯನ್ನು ಕಟ್ಟಿಕೊಂಡಿರಬೇಕು ಎಂಬ ಜಿಜ್ಞಾಸೆ ಕುತೂಹಲ ಸಹಜವಾಗಿ ಎಲ್ಲರಿಗೂ ಉಂಟಾಗುತ್ತದೆ. ಆದರೆ ಈ ಅರಸರುಗಳ ಅರಮನೆಗಳ ಬಗ್ಗೆ ಯಾರು ಸ್ಪಷ್ಟವಾದ ಮತ್ತು ಖಚಿತವಾದ ಚರಿತ್ರೆಯನ್ನು ಮಾಹಿತಿಯನ್ನು ಒದಗಿಸದೆ ಇರುವುದು ಅತ್ಯಂತ ದುರದೃಷ್ಟದ ಸಂಗತಿ. ಬೇಸಿಗೆಯ ಸಂದರ್ಭದಲ್ಲಿ ರಾಣಿಯರಿಗಾಗಿ ಇರುವ ತಂಪು ಅರಮನೆ ಕಮಲ್ ಮಹಲ್ ಎಂದು, ರಾಣಿ ಸ್ನಾನಕ್ಕಾಗಿಯೇ ಬೃಹತ ಪ್ರಮಾಣದಲ್ಲಿ ಈಜುಕೊಳ (ಕ್ವೀನ್ಸ್ ಬಾತ್) ನಿರ್ಮಿಸಿರುವಾಗ ಇನ್ನು ಅರಮನೆಗಳು ಎಷ್ಟೊಂದು ಅದ್ಬುತವಾಗಿರಬಹುದುದೆಂದು ಪ್ರವಾಸಿಗರಿಗೆ ಕುತೂಹಲ ಹೆಚ್ಚಿಸುತ್ತದೆ. ಅರಮನೆ ಯಾವ ಮಟ್ಟದಲ್ಲಿ ನಿರ್ಮಾಣಗೊಂಡಿರಬಹುದು ಎಂಬ ಒಂದು ಕಲ್ಪನೆ ಜನಸಾಮಾನ್ಯರಲ್ಲಿ ಮೂಡುತ್ತದೆ. ಮೈಸೂರ್ ಮಹಾಸಂಸ್ಥಾನದ ಅರಮನೆ ಅಷ್ಟು ದೊಡ್ಡದಿರುವಾಗ ಅದಕ್ಕಿಂತ ದಕ್ಷಿಣ ಭಾರತವನ್ನು ಆಳಿದ ವಿಜಯನಗರ ಸಾಮ್ರಾಜ್ಯದ ಅರಮನೆ ಎಷ್ಟು ವಿಶಾಲವಾಗಿರಬಹುದು ಎನ್ನುವ ಕುತೂಹಲ ಮೂಡುತ್ತದೆ ಮೈಸೂರಿನಲ್ಲಿರುವ ರತ್ನ ಖಚಿತ ಸಿಂಹಾಸನವು ವಿಜಯನಗರದ್ದು ಎಂದು ಹೇಳುವಾಗ ಇಂಥ ಸಿಂಹಾಸನವನ್ನು ಹೊಂದಿದ್ದ ಸಾಮ್ರಾಜ್ಯದ ಅರಮನೆ ಹೇಗಿರಬಹುದು ಎನ್ನುವುದು ಸಹಜ ಮತ್ತು ಆಶ್ಚರ್ಯದ ಸಂಗತಿಯೇ ಆಗಿದೆ. ಆದರೆ ಅಂತಹ ಅರಮನೆಗಳ




ದರ್ಶನದಿಂದ ಪ್ರಾರಂಭಗೊಂಡು ಕಡಲೆಕಾಳು ಸಾಸಿವೆ ಕಾಳು ಗಣೇಶ ಬಡವಿ ಲಿಂಗ, ಉಗ್ರನರಸಿಂಹ, ಕಮಲ್ ಮಹಲ್, ಹಜಾರ ಸ್ವಾಮಿ ದೇವಾಲಯ, ಮಹಾನವಮಿದ್ದಿಬ್ಬ, ರಾಣಿ ಸ್ನಾನ ಗೃಹ, ಕಲ್ಲಿನ ತೇರು ಸಂಗೀತ ಕಂಬಗಳ ವಿಠಲ ದೇವಸ್ಥಾನ, ಅಚ್ಚುತದೇವಾಲಯ ಪುರಂದರ ಮಂಟಪ ಕೊಂದಡರಾಮ ಇತ್ಯಾದಿಗಳನ್ನು ಬೆಳಗಿನಿಂದ ಸಂಜೆವರೆಗೂ ವೀಕ್ಷಿಸಿ ತಮ್ಮ ಕುತೂಹಲವನ್ನು ಮತ್ತಷ್ಟು ಹೆಚ್ಚಿಸಿ ಕೊಂಡು ಹಂಪಿಯನ್ನು ನೋಡುತ್ತಾ ನೋಡುತ್ತಾ ಮೈಮರೆಯುತ್ತಾರೆ.

ಬೆಳಗ್ಗನಿಂದ ಸಂಜೆ ಅವರಿಗೆ ಹಂಪಿಯ ಚರಿತ್ರೆಯ ಬಗ್ಗೆ ಮಾತನಾಡುತ್ತಾ, ಸ್ಮಾರಕಗಳನ್ನು ವಿಕ್ಷೀಸುತ್ತಾ, ಹಾಗೂ ತಾವು ಮಾರ್ಗದರ್ಶಕರಾಗಿ ಪಡೆದುಕೊಂಡ ಹಂಪಿಯ ಗೈಡುಗಳಿಂದ ಹಂಪೆಯ ಚರಿತ್ರೆ ಸ್ಥಳಗಳ ಚರಿತ್ರೆಯನ್ನು ಕೇಳುತ್ತಾ ಹೋದಾಗ ಇಂತಹ ದೊಡ್ಡ ಸಾಮ್ರಾಜ್ಯದಲ್ಲಿ ಇಷ್ಟೊಂದು ಸ್ಮಾರಕಗಳನ್ನು

ಬಗ್ಗೆ ಹಂಪಿಯಲ್ಲಿ ಮಾಹಿತಿ ನೀಡುವ ಕನಿಷ್ಠ ಮಾಹಿತಿಯು ಲಭ್ಯವಿಲ್ಲದಿರುವುದು ಅತ್ಯಂತ ಕಳವಳದ ಮತ್ತು ವಿಷಾದ ಸಂಗತಿ. ಸಂಬಂಧಿಸಿದ ಪುರಾತತ್ವ ಈ ಇಲಾಖೆಗಳು ಕನಿಷ್ಠ ಅರಮನೆಗಳು ಇರುವ ಬಗ್ಗೆ ಮಾಹಿತಿಯನ್ನು ಒದಗಿಸುವ ಕೆಲಸವನ್ನು ಮಾಡಬೇಕಾಗಿದೆ.

ವಿಜಯನಗರ ಸಾಮ್ರಾಜ್ಯದ 21 ರಾಜರುಗಳು ಆಳ್ವಿಕೆ ಮಾಡಿದ್ದಾರೆ ಈ ರಾಜರುಗಳು ವಾಸವಿದ್ದ ಅರಮನೆಗಳು ಎಲ್ಲಿವೆ, ಎಷ್ಟು ಇವೆ ಎನ್ನುವುದರ ಬಗ್ಗೆ ಇದುವರೆಗೂ ಖಚಿತ ಅಧ್ಯಯನಗಳನ್ನು ನಮ್ಮ ಚರಿತ್ರಕಾರರಾಗಲಿ ವಿದ್ವಾಂಸರಾಗಲಿ ಮಾಡಿದ ಬಗ್ಗೆ ಮಾಹಿತಿ ಇಲ್ಲ. ಮಹಾನವಮಿ ದಿಬ್ಬದ ಮೇಲೆ ನಿಂತು ಮುಂದೆ ಕಾಣುವ ತಳಪಾಯಗಳನ್ನು ತೋರಿಸಿ ಇದೆ ಅರಮನೆಯ ಆವರಣ. ಆದೇ ಕೃಷ್ಣದೇವರಾಯನ ಅರಮನೆ ಮತ್ತು ವೀರ ಹರಿಹರನ ಅರಮನೆ ಎಂದು ತೋರಿಸುವುದು ಸಾಮಾನ್ಯವಾಗಿದೆ. ಇದನ್ನು ಹೊರತು ಪಡಿಸಿದರೆ ಮತ್ಯಾವ ರಾಜರುಗಳ ಅರಮನೆಯನ್ನು ಇಲ್ಲಿ ನಾವು ಕಾಣುತ್ತಿಲ್ಲ. ಇಂತಹ ಮಹಾನ್ ಸಾಮ್ರಾಜ್ಯವನ್ನು ಕಟ್ಟಿದ ರಾಜರುಗಳ ಅರಮನೆ ಅದ್ಭುತವಾಗಿರಬೇಕು ಎಂಬ ಕಲ್ಪನೆ ಸಹಜವಾದದ್ದು. ಆದರೆ ಇಲ್ಲಿರುವ ಅರಮನೆಗಳನ್ನು ನೋಡಿದರೆ ಅಂತ ಕಲ್ಪನೆ ಬರುವುದಿಲ್ಲ. ನಮ್ಮ ತಲೆಮಾರಿನ ಹಿರಿಯ ಚರಿತ್ರಕಾರರು ವಿದ್ವಾಂಸರು ಶಾಸನ ತಜ್ಞರುಗಳು ಅರಮನೆಗಳ ಬಗ್ಗೆ ಸ್ಪಷ್ಟವಾದ ಚರಿತ್ರೆಯನ್ನು ಜನರಿಗೆ ಕಟ್ಟಿಕೊಡುವ ಅವಶ್ಯವಿದೆ. ಮುಂದಿನ ತಲೆಮಾರಿನ ಜನರಲ್ಲಿ ಇಂಥ ಚರಿತ್ರೆಯನ್ನು ಹುಡುಕುವ ಕಟ್ಟಿಕೊಡುವ ಕಷ್ಟದ ಕಾರ್ಯ ಮಾಡಲಾರರು ಎಂಬ ಸಹಜ ಅಭಿಪ್ರಾಯ. ಹೀಗಾಗಿ ಈಗ ಹಂಪೆಯ ಚರಿತ್ರೆಯನ್ನು ಹತ್ತಾರು ಬಗೆಗಳಲ್ಲಿ ಬರೆದಿರುವ ವಿಶ್ಲೇಷಿಸಿರುವ ಹಿರಿಯ ಚರಿತ್ರಕಾರರು ಈ ಬಗ್ಗೆ ಗಮನಹರಿಸಿ ಅರಮನೆಗಳನ್ನು ಪ್ರವಾಸಿಗರಿಗೆ ಪರಿಚಯಿಸುವ ಅವಶ್ಯವಿದೆ ಈ ಬಗ್ಗೆ ಪುರಾತತ್ವ ಇಲಾಖೆಯವರು ಗಂಭೀರವಾಗಿ ಚಿಂತಿಸಿ ಈ ಕಾರ್ಯವನ್ನು ಮಾಡಬೇಕಾಗಿದೆ.

ಎರಡು ಸಾವಿರ ವರ್ಷಗಳ ಹಿಂದಿನ ಹರಪ್ಪ ಸಂಸ್ಕೃತಿಯ ಚರಿತ್ರೆಯನ್ನು ನಮ್ಮ ಚರಿತ್ರಕಾರರು ನಿಖರವಾಗಿ ಕಟ್ಟಿಕೊಟ್ಟಿರುವಾಗ ಕೇವಲ 400 ವರ್ಷಗಳ ಹಿಂದಿನ ವಿಜಯನಗರದ ಚರಿತ್ರೆಯನ್ನು ಇದುವರೆಗೂ ಏಕೆ ಕಟ್ಟಿಕೊಡಲು ಸಾಧ್ಯವಾಗುತ್ತಿಲ್ಲ ಎನ್ನುವುದೇ ಈಗಿನ ಬಹುದೊಡ್ಡ ಪ್ರಶ್ನೆಯಾಗಿದೆ.



## ಕವಿ ಮನಸು

### ದೊರೆಯಲಿ ಪ್ರೋತ್ಸಾಹ




ತವಕವು ತುಂಬಿದ ಮನದಲಿ ಬರೆಯುವ
ಕವನವನೋದುವ ಜನರಿಲ್ಲ
ಕವಿಮನ ಕಲ್ಪಿಸಿ ಬರಹಕೆ ಇಳಿಸಿದ
ಕವಿತೆಯ ಓದುವ ಮನವಿಲ್ಲ

ಕರದಲಿ ಹಿಡಿಯುತ ಪುಸ್ತಕ ಲೇಖನಿ
ಬರಹವು ಅರ್ಧದೆ ಅದು ನಿಂತು
ಭರವಸೆ ತೊರೆಯುತ ಬರೆವುದ ಮರೆತರೆ
ಗುರಿಯನು ತಲಪುವ ಬಗೆಯೆಂತು

ಬಿಸಿಲಿನ ಬೇಗೆಗೆ ಚಿಗುರೆಲೆ ಬಾಡಲು
ಕಸಿವುದು ಬೆಳೆಯುವ ಉತ್ಸಾಹ
ಕುಸಿಯದೆ ಉಳಿಯಲು ದೊರೆವುದೆ ಆಶ್ರಯ
ಬಿಸಿಯನು ತಣಿಸುವ ಪ್ರೋತ್ಸಾಹ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

### ಕಣ್ಣೀರು

ಜಗದ ಎಲ್ಲ ಕೆರೆ ಭಾವಿಗಳಲ್ಲಿ
ಜಲ ಬತ್ತಿ ಹೋಗಬಹುದೇನೋ
ನೆಲದೆಲ್ಲ ಜೀವಿಗಳ ನಯನದಲ್ಲಿ
ಜಲ ಬತ್ತಿದ್ದ ನಾ ಕಾಣೆನೋ

ಆನಂದವಾದಾಗ ಆನಂದ ಬಾಷ್ಪ
ದುಃಖವದು ಬಂದಾಗ ಅಶೃತರ್ಪ
ಕಾಲ ಕಾಲಕ್ಕೆ ಸುರಿವ ಜಲ ಪುಷ್ಪ
ಕಣ್ಣೊಳಗಿಟ್ಟವನ ನೀವು ಬಲ್ಲಿರೇನಪ್ಪ

ಆತ್ಮೀಯ ಅಗಲಲು ದುಃಖದ ಕಟ್ಟೆ
ದೂರದ ಸಂಬಂಧಿಗೆ ಶುಷ್ಕ ಬಟ್ಟೆ
ಬೇಡದವರಿಗೆ ಮೊಸಳೆ ಕಣ್ಣೀರು
ಹಲವು ರೂಪದ ನಯನ ನೀರು

ಒಲೆಯೊಳಗೆ ಹಸಿಕಟ್ಟಿಗೆಯನಿಟ್ಟು
ಊದುಗೊಳವೆಯಿಂದ ಊದಿರಲು
ಸುರಿದಿತ್ತು ಧಾರಾಕಾರ ಕಣ್ಣೀರು
ಜೊತೆಗೆ ಸೇರಿತ್ತು ಸಿಂಬಳ ಸೋರು

ಎಳೆ ಬಾಲೆ ಈರುಳ್ಳಿ ಹೆಚ್ಚುತಿರಲು
ದಳ ದಳನೆ ಇಳಿದಿತ್ತು ಕಣ್ಣಲ್ಲಿ ನೀರು
ಸಂತೋಷವಲ್ಲ ದುಃಖವೂ ಆಗಿಲ್ಲ
ಕಾರಣ ಬೇಕಿಲ್ಲ ಕಣ್ಣಲ್ಲಿ ಕಣ್ಣೀರು

– ಕೆ ಎಂ. ಬಸವರಾಜ ಹೊಸಪೇಟೆ

### ಮೆಲುಕು

ಗತಿಸಿದ ಘಟನೆಯ ನೆನಪಿನ ಮೆಲುಕು
ಮನವನು ಮಾಡುವುದು ಚುರುಕು
ವರ್ತಮಾನವ ಅರಿತು ಹೆಜ್ಜೆ ಹಾಕು
ನಂಬಿಕೆಯ ಮೇಲೆ ನಿಂತಿರುವುದು ಬದುಕು

ಎಡವಿಬಿದ್ದಾಗ ಅಪಹಾಸ್ಯ ಮಾಡಿದವರು
ಕಷ್ಟದ ಸಮಯದಿ ಕೈ ಹಿಡಿದವರು
ಸಾಧನೆಗೈಯಲು ಹುರಿದುಂಬಿಸಿದವರು
ಪ್ರೀತಿ ಅಕ್ಕರೆ ಕಾಳಜಿ ತೋರಿದವರು

ಮೆಲುಕು ಹಾಕಿದಾಗ ನೆನಪಾಗುವರು
ಮಹಾನುಭಾವರು
ನೋವು ನಲಿವಿಗೆ ಕಾರಣರು ಹಲವರು
ಹಚ್ಚ ಹಸಿರು ಬಾಲ್ಯದ ಸವಿ ನೆನಪು
ಆಟ ಪಾಠ ತುಂಟಾಟಗಳ ಹೊಳಪು

ಅಮ್ಮನ ಸೆರಗಿನ ಹಿಂದೆ ಸುತ್ತುತ್ತಿದ್ದ ಪರಿ
ಅಪ್ಪ ಗದರಿದೊಡನೆ ಹುಡುಕುತ್ತಿದ್ದ ದಾರಿ
ಸಹೋದರ ಸಹೋದರಿಯರ ಜೊತೆಗಿನ
ಕಾದಾಟ
ಗೆಳೆಯ ಗೆಳತಿಯರೊಂದಿಗಿನ ನಲ್ಮೆಯ ಒಡನಾಟ

ಹರೆಯದ ದಿನಗಳಲ್ಲಿ ಮೂಡುತ್ತಿದ್ದ ಭಾವನೆ
ಕಂಗಳಲ್ಲಿ ಕಾಣುತ್ತಿದ್ದ ಸುಂದರ ಕಲ್ಪನೆ
ಹೇಳಲಾಗದೆ ಉಳಿದ ಅದೆಷ್ಟೋ ವೇದನೆ
ನೆನಪುಗಳೇ ಇಲ್ಲದ ಬದುಕೇಕೆ ಸುಮ್ಮನೆ

ಹುಡುಗಾಟದಲ್ಲೇ ಮುಗಿಸಿದ ವಿದ್ಯಾಭ್ಯಾಸವು
ಉದ್ಯೋಗಕ್ಕಾಗಿ ಶುರುವಾದ ಅಲೆದಾಟವು
ಯವ್ವನದ ಕಾಲದಲಿ ಮದುವೆಯು
ನಂತರ ಮಕ್ಕಳ ಲಾಲನೆ ಪಾಲನೆಯು

ಹೀಗೆ ಹಲವು ಜೀವನದ ಮೆಲಕು
ನೆನಪುಗಳೇ ಕಾರಣವೂ ಎಲ್ಲದಕ್ಕೂ
ಜೀವನದ ಕಹಿ ನೆನಪುಗಳ ಕೆದಕದಿರಿ
ಆಪತ್ಬಾಂಧವರನ್ನು ಎಂದೂ ಮರೆಯದಿರಿ

– ಚೇತನ ಭಾರ್ಗವ ಬೆಂಗಳೂರು

# ಮುಖವಾಡಗಳು ಮಾರಾಟಕ್ಕಿವೆ..!



ಮೊನ್ನೆ ನನ್ನ ಸ್ನೇಹಿತನ ಪ್ರಾಥಮಿಕ ಶಾಲೆಯಲ್ಲಿ ಪ್ರತಿಭಾ ಕಾರಂಜಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು ಚಿಕ್ಕ ಪುಟ್ಟ ಮಕ್ಕಳು, ಬಣ್ಣ ಬಣ್ಣದ ಬಟ್ಟೆಗಳನ್ನು ಹಾಕಿಕೊಂಡು ಶಾಲೆಯ ಒಳಗು ಹೊರಗು ಓಡಾಡಿದ್ದೇನು, ಆ ಮಕ್ಕಳ ಕೇಕೆ ಕುಣಿತ ಸಡಗರ, ಶಿಕ್ಷಕರ ಮೊಗದಲ್ಲಿನ ಸಾರ್ಥಕತೆ, ಪೋಷಕರ ಹಮ್ಮು ಬಿಮ್ಮು ಮೇಲಾಗಿ ತಮ್ಮ ಮಕ್ಕಳ ಬಗ್ಗೆ ಹೆಮ್ಮೆ ಒಟ್ಟಾರೆಯಾಗಿ ಒಂದು ರೀತಿಯ ಸಡಗರದ ಹಬ್ಬದ ವಾತಾವರಣ ಅಲ್ಲಿ ಉಂಟಾಗಿತ್ತು. ಇವೆಲ್ಲವುಗಳ ಮಧ್ಯ ಅತ್ತ ಕಡೆ ನೆಡೆಯುತ್ತಿದ್ದ ಮಕ್ಕಳ ಕಿರುನಾಟಕವೊಂದು ಏಕೋ ಬಹಳವಾಗಿ ಮನಸ್ಸಿಗೆ ನಾಟಿದಂತಾಯಿತು.

ಹೌದಲ್ಲ ಮುದ್ದು ಮುದ್ದಾದ ಮಕ್ಕಳ ಕೈಯಿಂದ ಅವರ ವಯಸ್ಸಿಗೂ ಮೀರಿದ, ಅವರ ಕಲ್ಪನಿಗೂ ನಿಲುಕದ ಕೆಲ ಪಾತ್ರಗಳನ್ನು ಅವರಿಂದ ಮಾಡಿಸಿ, ಹಿರಿಯರಾದ ನಾವು ಆನಂದಿಸುವುದನ್ನು ಕಾಣುತ್ತೇವೆ ಅಲ್ವೆ?. ಅದು ತಮಾಷೆಗಾಗಿಯಾದರು ಅವರಿಗೊಪ್ಪದಿದ್ದರು, ಅವರಿಂದ ಆ ಪಾತ್ರವನ್ನೊ, ಛದ್ಮವೇಷವನ್ನೊ, ಭಾಷಣವನ್ನೊ ಹಾಡನ್ನೊ ಕೊನೆಗೆ ಒಂದು ಕಥೆಯನ್ನೊ ಹೇಳಿಸಿ, ಅವರ ಬಾಯಿಂದ ಬರುವ ಆ ತೊದಲು ಮಾತುಗಳನ್ನು ಆಲಿಸಿ, ಮಕ್ಕಳು ಒಪ್ಪದ್ದಿದ್ದರೂ ಅವರನ್ನು ಪುಸುಲಾಯಿಸಿ, ಚಾಕುಲೇಟ್ ಹಣ್ಣು ಆಟಿಕೆಯ ಆಸೆಯನ್ನು ತೋರಿಸಿ ಅವರಿಂದ ಆ ಪಾತ್ರವನ್ನು ಮಾಡಿಸುತ್ತೇವೆ. ಅವರಲ್ಲಿ ಅವರು ದರಿಸಿರುವ ಪಾತ್ರದಲ್ಲಿ ನಮ್ಮನ್ನು ನಾವು ಕಲ್ಪಿಸಿಕೊಂಡು, ಇನ್ನಿಲ್ಲದಂತೆ ಸಡಗರವನ್ನು ಸಂಭ್ರಮವನ್ನು ಆನಂದವನ್ನು ಅನುಭವಿಸಿ ಖುಷಿಯಾಗುತ್ತೇವೆ.

ಇದೆಲ್ಲವೂ ಸರಿಯೇ, ಆದರೆ.....? ನಮಗೆ ಅರಿವಿಲ್ಲದಂತೆ, ಕೆಲವೊಮ್ಮೆ ಅನಿವಾರ್ಯವಾಗಿ, ಒಮ್ಮೊಮ್ಮೆ ಬೇಕಂತಲೇ ನಮ್ಮ ಜೀವನದಲ್ಲಿ, ನಿತ್ಯದ ಈ ಬಾಳ್ವೆಯಲ್ಲಿ ಕೆಲವು ಪಾತ್ರಗಳನ್ನು ನಮ್ಮ ಮೈ ಮನಗಳಲ್ಲಿ ಆಹ್ವಾನಿಸಿಕೊಂಡು ನಾವು ನಾವಾಗಿರಿದೆ, ಇನ್ನೇನೊ ಪಾತ್ರಗಳನ್ನು ಮಾಡುತ್ತಿರುತ್ತೇವೆ ಅಲ್ವೆ?.

ನಾವೆಲ್ಲರೂ ನಮಗರಿವಿಲ್ಲದಂತೆ ನಮ್ಮ ದೈನಂದಿನ ಬದುಕಿನಲ್ಲಿ ಇಂತಹ ಹಲವಾರು ಪಾತ್ರಗಳನ್ನು ವಿಧವಿಧವಾದ ಮುಖವಾಡವನ್ನು ಆಗಾಗ ಧರಿಸುತ್ತಲೇ ಇರುತ್ತೇವೆ ಅಲ್ಲವೆ..?. ಇದರಲ್ಲಿ ಕೆಲವು ಉದ್ದೇಶ ಪೂವ9ಕವಾಗಿ ಧರಿಸಿದರೆ ಇನ್ನೂ ಕೆಲವು ನಮಗೆ ಅರಿವಿಲ್ಲದಂತೆ ಧರಿಸಿಯಾಗಿರುತ್ತದೆ. ಏಕಾಗಿ ಹೀಗೆ..? ಹಾಗದರೆ, ಏನಿದು ಈ ಮುಖವಾಡ..? ನಾವೇಕೆ ಹೀಗೆ, ಎಲ್ಲಿಂದ ಈ ಮುಖವಾಡಗಳು ಬಂದವು..? ನಮಗರಿವಿಲ್ಲದಂತೆ ನಮ್ಮನ್ನೇ ಹೇಗೆ ಆವರಿಸಿಕೊಂಡವು..? ಎಂದು ನಿಮಗೆ ಅನಿಸಿರಬಹುದು ಅಲ್ವೆ..? ಖಂಡಿತವಾಗಿಯೂ ಪ್ರತಿಯೊಬ್ಬರಿಗೂ ಇದರ ಅನುಭವ ಜೀವನದಲ್ಲಿ ಆಗಿರುತ್ತದೆ.

ಇದು ಬೇರೇನೂ ಅಲ್ಲ, ಇದು ಯಾರೂ ನಮಗೆ ಕಲಿಸುವಂತದ್ದೂ ಅಲ್ಲ. ಆದರೆ ಇದರ ಅಡ್ಡ ಪರಿಣಾಮ ಇತರ ಮೇಲೆ ಮತ್ತು ಖುದ್ದಾಗಿ ನಮ್ಮ ಮೇಲೆಯೂ ಉಂಟಾಗದಂತೆ ನೋಡಿಕೊಳ್ಳುವುದು. ಇದು ನಮ್ಮ ನಮ್ಮ ವ್ಯಕ್ತಿತ್ವದಲ್ಲೇ ಬೆಳೆದು ಬರುವಂತದ್ದು,ಇದು ನಮ್ಮ ವ್ಯಕ್ತಿತ್ವದ ಒಂದು ಮಹತ್ವದ ಭಾಗವೂ ಆಗಿದೆ ಎಂದರೆ ನಾವು ನೀವೆಲ್ಲ ಒಪ್ಪಿಕೊಳ್ಳಲೇ ಬೇಕು.

ನಮ್ಮ ದೈನಂದಿನ ನಡೆ ನುಡಿಯಲ್ಲಿ, ನಮ್ಮ ನಿತ್ಯದ ಬದುಕಿನ ವಿವಿಧ ಮಜಲುಗಳಲ್ಲಿ, ನಮ್ಮ ವತ9ನೆಯಲ್ಲಿ ನಾವು ಪ್ರತಿನಿತ್ಯ ಕಾಣಬಹುದಾದಂತಹ ಒಂದು ವಿಶಿಷ್ಟವಾದ ಗುಣ ಎನ್ನಬಹುದು. ಆದುದರಿಂದ ಮನುಷ್ಯರ ಈ ಗುಣವನ್ನು ಅವರ ಈ ರೀತಿಯ ವರ್ತನೆಗಳನ್ನು, ಅವುಗಳಿಗೆ ಕಾರಕ, ಪ್ರೇರಕ ಮತ್ತು ಪೂರಕ ಕಾರಣಗಳನ್ನು ವಿಸ್ತೃತವಾಗಿ ಅಧ್ಯಯನ ಮಾಡುವ ಶಾಸ್ತ್ರವನ್ನು ಮಾನವರ ಮನೋವಿಜ್ಞಾನದಲ್ಲಿ "ಮಾಸ್ಕಿಂಗ್ (ಮುಖ ಮರೆಸುವುದು/ ಮುಖ ಮರೆಮಾಚುವಿಕೆ/ ಮುಖವಾಡ ಧರಿಸುವುದು/ ಬಣ್ಣ ಬದಲಿಸುವುದು/ ಊಸರವಳ್ಳಿ) ಎಂದು ಕರೆಯಲಾಗುತ್ತದೆ. ಇದರ ಅರ್ಥ ಈಗಾಗಲೆ ನಿಮಗೆಲ್ಲ ಗೊತ್ತಾಗಿರಬೇಕಲ್ವೆ. ಏಕೆ ಮನುಷ್ಯರಾದ ನಾವು ಹೀಗೆ ಮಾಡುತ್ತೇವೆ...? ಇದು ಕೇವಲ ಮನುಷ್ಯರಲ್ಲಿ ಮಾತ್ರ ಇದೆಯಾ ಅಥವಾ ಇತರೆ ಪ್ರಾಣಿಗಳಲ್ಲೂ ಈ ರೀತಿಯ ಗುಣ ವಿಶೇಷತೆಯನ್ನು ಕಾಣಬಹುದೇ ಎಂದರೆ, ಉತ್ತರ ಹೌದು. ಕೆಲವು ಪ್ರಾಣಿಗಳಲ್ಲೂ ಮತ್ತೂ ಕೆಲವು ಕೀಟಗಳಲ್ಲೂ ಇಂತಹ ವಿಶಿಷ್ಠವಾದ ಗುಣವನ್ನು ಕಾಣಬಹುದಾಗಿದೆ ಎನ್ನುತ್ತದೆ ವಿಜ್ಞಾನ.



ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ

Scan For Digital Colourful
HAMPI TIMES E-paper

ಆದರೆ ಬಹುಮುಖ್ಯವಾಗಿ ಇಲ್ಲಿ ಗಮನಿಸಬೇಕಾಗಿರುವುದು ಎಂದರೆ, ಪ್ರಾಣಿಗಳಲ್ಲೂ, ಕೀಟಗಳಲ್ಲೂ, ಈ ರೀತಿಯ ಅಗತ್ಯಕ್ಕೆ ತಕ್ಕಂತೆ ವಿವಿಧ ಪಾತ್ರಗಳನ್ನು ನಿರ್ವಹಿಸುವುದು, ಸಮಯಕ್ಕೆತಕ್ಕಂತೆಮುಖವಾಡಗಳನ್ನು ಬದಲಾಯಿಸುವುದು, ಬಣ್ಣ ಬದಲಿಸುವುದು ಅವುಗಳ ಮೂಲಬೂತ ಅವಶ್ಯಕತೆಯಾದ ಆಹಾರಕ್ಕಾಗಿ ಹೊರತು ಮತ್ತೇನಲ್ಲ. ಆದರೆ ಮಾನವರಲ್ಲಿ ಮಾತ್ರ ಇದು ಅವನ ವ್ಯಕ್ತಿತ್ವದ ಒಂದು ಅಂಶವಾಗಿ ಅವನ ಮಾನಸಿಕ ಅಥವ ದೈಹಿಕ ವಿಕಾರಗಳನ್ನು

(ರೋಗಲಕ್ಷಣಗಳನ್ನು), ಅವನ ನಡವಳಿಕೆಗಳನ್ನು ಹತ್ತಿಕ್ಕಿಕೊಳ್ಳಲು, ಅವನ ಸ್ವಭಾವದ ವಸ್ತು ಸ್ಥಿತಿಯನ್ನು ಮರೆಮಾಚಲು ಅಥವಾ ಅವನ ನೋವು ನಲಿವುಗಳನ್ನು ಮರೆಮಾಚಲು ಬಳಸುವ ಮಾರ್ಗವಾಗಿದೆ, ಅದರಲ್ಲಿ ಅವನ ಅಹಾರದ ಅವಶ್ಯಕತೆಯೂ ಒಂದಾಗಿರಬಹುದು.

ಇದಕ್ಕೆ ಕಾರಣಗಳು ಹಲವಾರು, ಅಂತಹ ಕಾರಣಗಳನ್ನು ಆದಷ್ಟು ಬೇಗ ಅರಿಯಲೇಬೇಕು, ಹಾಗಾದಾಗ ಮಾತ್ರ ಇದೊಂದು ವಿಶಿಷ್ಠ ಗುಣ ಎನಿಸಿಕೊಳ್ಳುತ್ತದೆ. ಇಲ್ಲವಾದರೆ ಮಾನಸಿಕ ಕಾಯಿಲೆ ಎಂದುಬಿಟ್ಟಾರು ಉಷಾರು....

1. ಸಹಜ ಮಾನವನಲ್ಲಿ ಕಂಡುಬರುವ ಅನಾರೋಗ್ಯೆ, ಅಂಗವೈಕಲ್ಯಗಳನ್ನು, ದೂಷಗಳನ್ನು, ಅಂತಸ್ತು ಆಡಂಬರಗಳನ್ನು ಮುಚ್ಚಿಡಲು ಇತ್ಯಾದಿ.

2. ಇತರರನ್ನು ಮೊಸಗೊಳಿಸಲು, ಅನಾರೋಗ್ಯಕರ ಸ್ಪರ್ಧೆಗಾಗಿ, ಪ್ರಶಂಸೆ, ಅಧಿಕಾರ, ಕೆಲವು ಸಲ ಅಹಂಗಾಗಿ, ಮಾನ ಸಮ್ಮಾನಗಳಿಗಾಗಿ ಇತ್ಯಾದಿ.

3. ಓಲೈಕೆಗಾಗಿ, ವ್ಯವಹಾರಕ್ಕಾಗಿ, ಸ್ಥಾನ ಮಾನಗಳಿಗಾಗಿ, ಮೆಚ್ಚಿಗೆಗಾಗಿ ಇತ್ಯಾದಿ.

ಸರಿ ಹಾಗಾದರೆ, ಇಂತಹ ಪಾತ್ರ/ಮುಖವಾಡ ನಮಗೆಲ್ಲ ಬೇಕೆ..? ಎಂದರೆ ಉತ್ತರ 1. ಬೇಡ, 2. ಬೇಕು ಎನ್ನಬಹುದಾಗಿದೆ. ಏಕೆಂದರೆ ಈ ರೀತಿಯ ಮುಖವಾಡಗಳು ಕೆಲವು ಸಲ ಬೇಕಾಗುತ್ತವೆ ಮತ್ತೆ ಹಲವಾರು ಬಾರಿ ಬೇಡವೇ ಬೇಡ ಎನಿಸುತ್ತದೆ. ಇಲ್ಲಿ ಸರಿ ತಪ್ಪು ಎನ್ನುವುದಕ್ಕಿಂತ ಅದರ ಪರಿಣಾಮ ಏನು ಅನ್ನುವುದು ಮುಖ್ಯ. ಈ ರೀತಿಯ ಮಾನವನ ವರ್ತನೆಗಳಿಂದ ಸಮಾಜದಲ್ಲಿ ನಮಗೂ ಮತ್ತು ಇತರರಿಗು ಇದರ ಪರಿಣಾಮವೇನು ಎನ್ನುವುದನ್ನು ಒಮ್ಮೆ ಯೋಚಿಸಬೇಕು. ಪ್ರತಿನಿತ್ಯ ಹೋರಾಟವೇ ಜೀವನವಾಗಿರುವುದರಿಂದ ಅದರಲ್ಲೆ ನಾವು ಬದುಕಬೇಕಾಗಿರುವುದರಿಂದ, ಅಲ್ಲಿಯೇ ನಮಗೊಂದು ನೆಲೆ-ಬೆಲೆ ಬೇಕಾಗಿರುವುದರಿಂದ ನಾವು ಮಾಡುವ ಈ ನಮಗರಿವಿಲ್ಲದಂತೆ, ನಮಗರಿವಿದ್ದೂ ನಮ್ಮ ಮನಸ್ಸಿಗೆ ಎಷ್ಟು ಮುದ ನೀಡುತ್ತದೆ, ಎಷ್ಟು ತೃಪ್ತಿ ನೀಡುತ್ತದೆ, ಇದರಿಂದ ನಮಗೆಷ್ಟು ಸಂತೋಷ ಉಂಟಾಗುತ್ತದೆ ಎನ್ನುವುದರ ಜೊತೆಗೆ, ಇತರರಿಗೆ ಇದರಿಂದ ಏನು...? ಎನ್ನುವುದರ ಸ್ಪಷ್ಟವಾದ ಕಲ್ಪನೆ ಇರಬೇಕು. ಇಲ್ಲಿ ಯಾರೂ ಒಬ್ಬರಲ್ಲ, ಇದು ಸಮುದಾಯ, ನಾವು ಸಮಾಜದಲ್ಲೆ ಬಾಳಬೇಕು, ಬದುಕು ಕಟ್ಟಿಕೊಳ್ಳಬೇಕು ಅಲ್ಲವೆ.

ಹಾಗಾಗಿ ನಮ್ಮ ಮುಖವಾಡಗಳು/ ನಮ್ಮ ಪಾತ್ರಗಳು ನಮ್ಮ ನಮ್ಮನ್ನು ಇತರರೊಂದಿಗೆ ಇತರರನ್ನು ನಮ್ಮೊಂದಿಗೆ ಬೆಸೆಯಬೇಕು, ನಾವು ಬದುಕಬೇಕು ಜೊತೆಗೆ ಇತರರನ್ನೂ ಬದುಕಗೊಡಬೇಕು. ಆದರೆ ಈ ಎಲ್ಲವುಗಳ ಮಧ್ಯ ನಾವು ನಮ್ಮ ತನವನ್ನು "ನಾನು" ಯಾರು ಎನ್ನುವುದನ್ನು, ನನ್ನ ಸ್ವಂತ ಅಸ್ತಿತ್ವವನ್ನು ಕಳೆದುಕೊಳ್ಳಬಾರದಲ್ಲವೆ.

ನಾನು ಯಾರು, ನನ್ನ ಉದ್ದೇಶವೇನು..? ನನ್ನ ದೌಬ9ಲ್ಯ ಮತ್ತು ಸಾಮಥ್ಯ9ಗಳೇನು ? ಎನ್ನುವ ತಿಳುವಳಿಕೆಯನ್ನು ಎಂದಿಗೂ ಮರೆಯಬಾರದು. ಆಗ ಈ ಪಾತ್ರಗಳನ್ನು/ಮುಖವಾಡ ಧರಿಸುವುದು ವಿಶಿಷ್ಠವಾಗಿ ಕಾಣುತ್ತದೆ, ಇಲ್ಲವಾದರೆ ಒಂದು ಮಾನಸಿಕ ಕಾಯಿಲೆ ಎನ್ನಲಡ್ಡಿಯಿಲ್ಲ ಅಲ್ಲವೆ..? ಅಂತೂ ಮಕ್ಕಳ ನಾಟಕ ಮುಗಿದಿತ್ತು, ಅಲ್ಲಿ ಬಂದವರಿಗೆಲ್ಲ ಅವರವರ ಪಾತ್ರದ/ಮುಖವಾಡದ ಪರಿಚಯವಾಗಿತ್ತು...

## ಹಣವೆಂದರೆ ಹೆಣವು ಬಾಯಿ ಬಿಡುತ್ತೆ!

# ಹಣ ಉಳಿಸುವುದು ಕಾಯಿಲೆ ಆಗದಿರಲಿ

■ ಪ್ರೊ. ಬಿ.ಪಿ ಜೈನರ ಗದಗ



ಹೌದು ಬದುಕಿಗೆ ಹಣ ಬೇಕು ಹಾಗೆಂದು ಹಣ ಕೂಡಿಡುವುದು ವ್ಯಸನವಾಗ ಬಾರದು. ಹಣವನ್ನು ತಿನ್ನಲು ಸಾಧ್ಯವಿಲ್ಲ, ನೀವು ಕಷ್ಟಪಟ್ಟುಗಳಿಸಿದ ಹಣವನ್ನು ಇನ್ಯಾರು ಅನುಭವಿಸುವಂತಹ ಸ್ಥಿತಿ ಒಪ್ಪುವಂತದ್ದಲ್ಲ. ಭವಿಷ್ಯದ ದೃಷ್ಟಿಯಿಂದ ಹಣ ಉಳಿತಾಯ ಮಾಡೋದು ಉತ್ತಮ ಆದರೆ ಅತಿಯಾಗಿರಬಾರದು ಚಾಣಕ್ಯನ ಪ್ರಕಾರ ಎಲ್ಲಿ ಹಣವಿರುತ್ತದೋ ಅಲ್ಲಿ ಮಿತ್ರ, ಎಲ್ಲಿ ಹಣವಿರುತ್ತದೊ ಅಲ್ಲಿ ಬಾಂಧವರು, ಎಲ್ಲಿ ಹಣವಿರುತ್ತದೋ ಅಲ್ಲಿ ಯಶಸ್ಸು ಹಾಗೆ ಹಣ ಇದ್ದವನು ಎಲ್ಲವನ್ನು ಆಕರ್ಷಿಸುತ್ತಾನೆ. ಹಣ ಇದ್ದವನು ಮಾತ್ರ ಈ ಪ್ರಪಂಚದಲ್ಲಿ ಜೀವಿಸುತ್ತಾನೆ. ಇವತ್ತಿನ ದಿನಮಾನಗಳಲ್ಲಿ ಜನರು ಹಣವನ್ನು ಮಾತ್ರ ಭದ್ರವಾಗಿ ಹಾಗೆ ಗಟ್ಟಿಯಾಗಿ ಇಟ್ಟುಕೊಳ್ಳುತ್ತಾರೆ ಹೊರತು ಪ್ರೀತಿ ಸಂಬಂಧಗಳನ್ನಲ್ಲ ಹಣ ಇದ್ದರೆ ಶತ್ರು ಸಹ ಸ್ನೇಹಿತನಾಗುತ್ತಾನೆ ಕೊಟ್ಟ ಸಾಲ ಕೇಳಿದರೆ ಸ್ನೇಹಿತರು ಶತ್ರುಗಳಾಗುತ್ತಾರೆ ಹೀಗಾಗಿ ಸಾಲ ಕೊಡುವ ಮುನ್ನ ಸಾವಿರ ಸಲ ಯೋಚನೆ ಮಾಡಿ ಕೊಡಿ ಕಾರಣ ನಿಮ್ಮ ಹಣವನ್ನು ನೀವು ಕೊಟ್ಟು ಭಿಕ್ಷೆಗಾರರಾಗಿ ಕೇಳುವಂತೆ ಆಗುತ್ತದೆ ಹಣ ತೆಗೆದುಕೊಂಡವನು ಹಣ ಇರುವವರ ತರಹ ಹಣ ಕೊಡುವವರ ಹಾಗೆ ದಿನಾಂಕದ ಮೇಲೆ ದಿನಾಂಕಗಳನ್ನು ಕೊಡುತ್ತಾನೆ ಇದು ಸತ್ಯ. ಇವತ್ತಿನ ದಿನಮಾನಗಳಲ್ಲಿ ಹಣಕ್ಕೆ ಇರುವ ಗೌರವ ಗುಣ ಮತ್ತು ಸಂಬಂಧಗಳಿಲ್ಲ ಇಲ್ಲ ಇರುವ ಸಂಬಂಧ ಸಂಬಂಧಿಕರು ಯಾವ ದಿನ ನಿಮ್ಮ ಬಳಿ ಇರುವ ಹಣವೆಲ್ಲ ಖಾಲಿ ಆಗುತ್ತದೆಯೋ ಆ ದಿನವೇ ನಿಮ್ಮ 95 % ಸಂಬಂಧಿಕರು ದೂರ ಸರಿಯುತ್ತಾರೆ. ಹಿರಿಯರು ಹೇಳುವ ಪ್ರಕಾರ ಹಣವಿದ್ದರೆ ಅಪರಿಚಿತರು ಕೂಡ ಸಂಬಂಧಿಕರು ಹಣವಿಲ್ಲದೆ ಇದ್ದರೆ ಸಂಬಂಧಿಕರು ಕೂಡ ಅಪರಿಚರಿತರಾಗುತ್ತಾರೆ ಜೇಬಲ್ಲಿ ಹಣ, ಚಟ್ಟದಲ್ಲಿ ಹಣ ಎರಡು ಹಿಂದೇನೆ ಈ ಜನ ಕಾರಣ ಹಣ ಮುಖ್ಯ ಎನ್ನುವವರಿಗೆ ಒಳ್ಳೆಯತನ ಕಡಿಮೆ ಒಳ್ಳೆಯತನ ಮುಖ್ಯ ಎನ್ನುವವರಿಗೆ ಹಣ ಕಡಿಮೆ ಹೀಗಾಗಿ ಹಣದ ಹಿಂದೆ ಅತಿಯಾಗಿ ಜ್ಯೋತಿ ಬಿಡಬಾರದು ಮನುಷ್ಯತ್ವ ಒಂಟಿಜಥಿ ನೋಡಿ ಬರಲ್ಲ ಮನುಷ್ಯನ ಮನಸ್ಸು ನೋಡಿ ಬರುತ್ತದೆ ಆದ್ದರಿಂದ ಹಣ ಇಲ್ಲದವನು ಬಡವನು ಅಲ್ಲ ಹಣವಿದ್ದು ಗುಣ ಇಲ್ಲದವನು ನಿಜವಾದ ಬಡವ ನಿಮಗೆ ತಿಳಿದಿರಲಿ ಅವನಿಂದಲೇ ತಯಾರಾದ ಹಣ ಕೊನೆಗೆ ಅವನಿಗೆ ತನ್ನ ಗುಲಾಮನನ್ನಾಗಿ ಮಾಡಿಕೊಳ್ಳುತ್ತದೆ.

ಹಣ ಯಾರಿಗೆ ಬೇಡ ಹೇಳಿ ? ಹಣವಿಲ್ಲದ ಜೀವನವನ್ನು ಇಂದಿನ ಮಟ್ಟಕ್ಕೆ ಊಹಿಸಿಕೊಳ್ಳಲು ಸಾಧ್ಯವಿಲ್ಲ ಹಣವೆಂದರೆ ಹೆಣವೇ ಬಾಯಿ ಬಿಡುತ್ತದೆ ಅಂದರೆ ಜೀವವಿಲ್ಲದ ಹೆಣವೆ ಬಾಯಿ ಬಿಡುತ್ತದೆ ಅಂದಮೇಲೆ ಜೀವವಿರುವವರು ಕಥೆಯನ್ನು? ಜೀವನದ ಅವಿಭಾಜ್ಯ ಅಂಗವಾಗಿದೆ ಹಣ ಮನುಷ್ಯ ಹಣ ಮಾಡಲು ಕಾರಣ ಆಹಾರ,ಬಟ್ಟೆ, ಮನೆ ಹಣದ ಬೆಂಬಲವಿಲ್ಲದೆ ಮಕ್ಕಳಿಗೆ ಉತ್ತಮ ಶಾಲೆಗೂ ಸೇರಿಸಲಾಗುವುದಿಲ್ಲ ಹಣದ ಮಹಿಮೆ ಶಕ್ತಿಯೇ ಅಂತದ್ದು ಪಂಚಾಯಿತಿಯ ಎಲೆಕ್ಷನ್ ನಿಂದ ಹಿಡಿದು ಅಮೆರಿಕ ಅಧ್ಯಕ್ಷ ಸ್ಥಾನದವರೆಗೂ ಹಣ ಬೇಕು ಹಣದ ಬೆಂಬಲವಿಲ್ಲದೆ ಸಣ್ಣ ಸೊಸೈಟಿಗೆ ಕೂಡ ಅಧ್ಯಕ್ಷನಾಗುವುದು ಕಷ್ಟ ಆದ್ದರಿಂದ ಉತ್ತಮ ಗುಣಮಟ್ಟದ ಜೀವನ ನಡೆಸಲು ಹಣ ಬೇಕೇ ಬೇಕು ಹಾಗಂತ ಇನ್ನೊಬ್ಬರ ಜೀವನ ಶೈಲಿ ನೋಡಿ ಆಸೆ ಪಡುವುದು ತಪ್ಪು ಉದಾಹರಣೆ ಹಣವುಳ್ಳವರು ಹಾಕಿಕೊಳ್ಳುವ ಬಟ್ಟೆ , ಧರಿಸಿದ ವಾಚ್, ಕಾರ್, ರೆಸ್ಟೋರೆಂಟ್ ಹೀಗೆ ಶ್ರೀಮಂತರ ಬದುಕನ್ನು ತಿಳಿಯಲು ಜನಸಾಮಾನ್ಯನಲ್ಲಿ ಕುತೂಹಲವಿದೆ ಆದರೆ ಅದರಿಂದ ನಮಗೆ ನೆಮ್ಮದಿ ಸಿಗುವುದಿಲ್ಲ ಹಾಗಂತ ಅಭಿಲಾಷೆ ಇಟ್ಟುಕೊಳ್ಳುವುದು ಖಂಡಿತವಾಗಿಯೂ ತಪ್ಪಲ್ಲ ಅನ್ಯ ಮಾರ್ಗಗಳನ್ನ ತುಳಿದು ಹಣ ಸಂಪಾದಿಸುವುದು ತಪ್ಪು. ಹಣಕ್ಕಿಂತ ಕೆಟ್ಟದ್ದು ಬೇರೆ ಯಾವುದೂ ಈ ಜಗತ್ತಿನಲ್ಲಿ ಇಲ್ಲ ಎನ್ನುವ ಮಾತಿದೆ ಮನುಷ್ಯನ ಸೃಷ್ಟಿಯಲ್ಲಿನ ಅತ್ಯಂತ ಕೆಟ್ಟದ್ದು ಹಣ ಎನ್ನುತ್ತಾರೆ ಜಗತ್ತಿನ ಎಲ್ಲಾ ಕೆಡಕುಗಳಿಗೆ ಹಣವೇ ಕಾರಣ ಎನ್ನುತ್ತೇವೆ.

ಒಟ್ಟಿನಲ್ಲಿ ಸರಳವಾಗಿ ಹೇಳುವುದಾದರೆ ಜೀವನ ನಡೆಸಲು ಹಣ ಮುಖ್ಯವೇ ಹೊರತು ಹಣ ಮಾಡುವದೇ ಜೀವನವಾಗಬಾರದು ಕಾರಣ ಆಸೆಗೆ ಹಣವಾದರೆ ದುರಾಸೆಗೆ ಹೆಣವಾಗುವುದು. ಕಷ್ಟಪಟ್ಟು ದುಡಿದ ಹಣವೇ ಶಾಶ್ವತ ದುರ್ಮಾರ್ಗದಿಂದ ದುಡಿದ ಹಣವೆಂದು ಶಾಶ್ವತವಲ್ಲ ಅದೇನೇ ಇರಲಿ ಬದುಕಿಗೆ ಹಣ ಬೇಕು ಆದರೆ ಕೇವಲ ಹಣ ಗಳಿಕೆಗೆ ನಮ್ಮನ್ನು ಸೀಮಿತಗೊಳಿಸಬಾರದು ಹಣದಿಂದ ಬರುವ ಸ್ನೇಹ ಪ್ರೀತಿಗಳು ಹಣವಿರುವ ತನಕ ಇರುತ್ತದೆ ಗುಣ ದಿಂದ ಬರುವ ಸ್ನೇಹ ಪ್ರೀತಿಗಳು ಗುಣವಿರುವ ತನಕ ಇರುತ್ತದೆ, ಯಾವುದು ಶಾಶ್ವತವಲ್ಲ ಬದುಕಿನಲ್ಲಿ ಬಂದಂತೆ ಬದುಕಬೇಕು. ಹಣದಿಂದ ಹಣೆಬರಹ ಬದಲಿಸಲು ಸಾಧ್ಯವಿಲ್ಲ ಸಂಬಂಧ ಮತ್ತು ಹಣ ಎರಡರಲ್ಲೂ ಒಂದೇ ರೀತಿ ಗಳಿಸುವುದು ಕಷ್ಟ ಕಳೆಯುವುದು ಸುಲಭ ಎರಡನ್ನೂ ಗಳಿಸಿ ಉಳಿಸಿಕೊಳ್ಳೋಣ.

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಶ್ರಾವಣ । ಸಂವತ್ಸರ: ಕ್ರೋಧಿ

**25–08–2024 – ಭಾನುವಾರ**

| | |
|---|---|
| ತಿಥಿ | : ಸಪ್ತಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಭರಣಿ |
| ಯೋಗ | : ಧ್ರುವ |
| ಕರಣ | : ವಿಷ್ಟಿ |
| ಸೂರ್ಯೋದಯ | : 06:08:00 |
| ಸೂರ್ಯಾಸ್ತ | : 18:59:27 |
| ರಾಹು ಕಾಲ | : 17:14–18:49 |
| ಯಮಘಂಡ ಕಾಲ | : 12:29–14:04 |
| ಗುಳಿಕ ಕಾಲ | : 15:39–17:14 |

## ತುಂಗಭದ್ರಾ ನೀರಿನ ಮಟ್ಟ



ಶನಿವಾರ : 24–08–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1627.54 ಅಡಿ |
| ಒಳ ಹರಿವು | 31723 ಕ್ಯುಸೆಕ್ |
| ಹೊರ ಹರಿವು | 9830 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 85.113 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1626.61 ಅಡಿ |
| ಒಳ ಹರಿವು | 2032 ಕ್ಯುಸೆಕ್ |
| ಹೊರ ಹರಿವು | 10208 ಕ್ಯುಸೆಕ್ |
| ಸಾಮರ್ಥ್ಯ | 85.619 ಟಿಎಂಸಿ |

# ಬಾಂಗ್ಲಾದಲ್ಲಿ ಹಿಂದೂಗಳ ಮೇಲೆ ದೌರ್ಜನ್ಯ ಖಂಡಿಸಿ ಮೌನ ಜಾಥಾ




■ **ಹಂಪಿ ಟೈಮ್ಸ್ ಹೊಸಪೇಟೆ**
ನೆರೆ ರಾಷ್ಟ್ರ ಬಾಂಗ್ಲಾದಲ್ಲಿ ಅಲ್ಪಸಂಖ್ಯಾತ ಹಿಂದೂಗಳ ಮೇಲೆ ನಿರಂತರವಾಗಿ ನಡೆಯುತ್ತಿರುವ ದೌರ್ಜನ್ಯ ಖಂಡಿಸಿ ಹಿಂದೂಪರ ಸಂಘಟನೆಗಳು ಕಪ್ಪು ಪಟ್ಟಿ ಧರಸಿ ನಗರದಲ್ಲಿ ಶನಿವಾರ ಬೃಹತ್ ಪ್ರತಿಭಟನೆ ನಡೆಸಿದವು.

ನಗರದ ವಡಕರಾಯಸ್ವಾಮಿ ದೇವಸ್ಥಾನದಿಂದ ಆರಂಭವಾದ ಪ್ರತಿಭಟನೆ ಯಲ್ಲಿ ಹಿಂದೂ ಜಾಗೃತಿ ಸಮಿತಿ ಶ್ರೀಕಾಂತ ಪೂಜಾರ ಮಾತನಾಡಿ, ನಮ್ಮಿಂದಲೇ ಎಲ್ಲಾ ನೆರವನ್ನು ಪಡೆದು ನಮ್ಮ ಹಿಂದೂಗಳ ಮೇಲೆಯೇ ದೌರ್ಜನ್ಯ ನಡೆಸುತ್ತಿರುವುದು ಖಂಡನೀಯ. ಮಹಿಳೆಯರು ಮತ್ತು ಮಕ್ಕಳ ಮೇಲೆ ನಡೆಯುತ್ತಿರುವ ಅತ್ಯಾಚಾರ ಕೊನೆಗೊಳ್ಳಬೇಕು. ಮಹಿಳೆಯರನ್ನು ಗೌರವ ದಿಂದ ಕಾಣಬೇಕು. ಹಿಂದುಗಳು ಸಹನೆ ದೌರ್ಬಲ್ಯವಲ್ಲ. ಪರೀಕ್ಷಿಸಬೇಡಿ. ಸರ್ವರ ಏಳಿಗೆ ಮತ್ತು ಶಾಂತಿಯುತ ಬದುಕನ್ನು ಹಿಂದುಗಳು ಬಯಸುತ್ತಾರೆ. ದೌರ್ಜನ್ಯ ಕೊನೆಗೊಳಿಸ ಬೇಕೆಂದು ಆಗ್ರಹಿಸಿ ಕಪ್ಪ ಪಟ್ಟಿ ಧರಿಸಿ ಮೌನವಾಗಿ ಪ್ರತಿಭಟಿಸಿದರು.

ವಿವಿಧ ಸಮಾಜಗಳ ಮುಖಂಡರು ಯುವ ಜನಾಂಗ ಆಗಮಿಸುವ ಮೂಲಕ ತಮ್ಮ ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಿ ಪಾಲ್ಗೊಂಡಿರುವುದು ನಮ್ಮ ಆಕ್ರೋಶ ವ್ಯಕ್ತಪಡಿಸಿದರು. ಬೃಹತ್ ಸಂಖ್ಯೆಯಲ್ಲಿ ಸಾರ್ವಜನಿಕರು, ಸಮಾಜದ ಮುಖಂಡರು, ಸಂಘ ಸಂಸ್ಥೆಗಳು, ತಾಯಂದಿರು ಮತ್ತು ಯುವ ಸಮೂಹ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಹಿಂದೂ ನಾವೆಲ್ಲಾ ಒಗ್ಗಟ್ಟಾಗಿದ್ದೇವೆ ಎಂಬ ಸಂದೇಶವನ್ನು ಸಾರಿದರು. ಮುಖಂಡರಾದ ಜಗದೀಶ್ ಕುಮಟಗಿ, ವೀರಣ್ಣ, ಪ್ರವೀಣ್, ಕಿಚಡಿ ಕೊಟ್ರೇಶ, ಪ್ರಮೋದ್ ಜೈನ್, ಸೂರಿ ಬಂಗಾರ, ರೇವಣಸಿದ್ಧಪ್ಪ, ಕಿರಣ್, ರಮೇಶ ಗುಪ್ತಾ, ಮದುರಚೆನ್ನಶಾಸ್ತ್ರಿ ಪ್ರಮೋದ ಜೈನ್, ಭೂಪಾಳ ಶ್ರೀ ಪಾದ, ಶ್ರೀಕಾಂತ, ನರಸಿಂಹಮೂರ್ತಿ, ಕೇಶವ್, ಪಾಂಡು, ಪತಂಜಲಿ ಯೋಗ ಸಮಿತಿಯ ಕಿರಣ್ ಕುಮಾರ, ಹುಡಾ ಮಾಜಿ ಅಧ್ಯಕ್ಷ ಅಶೋಕ ಜೀರೆ ಮಹಿಳಾ ಘಟಕದ ಅನೇಕರು ಪಾಲ್ಗೊಂಡಿದ್ದರು.

# ಕೂಡ್ಲಿಗಿ ಜ್ಞಾನಭಾರತಿ ಬಿಇಡಿ ಕಾಲೇಜಿಗೆ ಶೇ.100 ಫಲಿತಾಂಶ






■ **ಹಂಪಿ ಟೈಮ್ಸ್ ಕೂಡ್ಲಿಗಿ**
ಬಳ್ಳಾರಿಯ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಪ್ರಸಕ್ತ ಸಾಲಿನಲ್ಲಿ ನಡೆದ ಪ್ರಥಮ ಮತ್ತು ತೃತೀಯ ಸೆಮಿಸ್ಟರ್ ಬಿಇಡಿ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದೆ.

ಈ ವಿಶ್ವವಿದ್ಯಾಲಯ ಅಡಿಯಲ್ಲಿ ಬರುವ ಪಟ್ಟಣದ ಜ್ಞಾನಭಾರತಿ ಬಿಇಡಿ ಕಾಲೇಜಿನ ಪ್ರಥಮ ಸೆಮಿಸ್ಟರ್ ಬಿಇಡಿ ಪರೀಕ್ಷೆಯಲ್ಲಿ 96 ವಿದ್ಯಾರ್ಥಿಗಳು ಹಾಜರಾಗಿದ್ದರು. ಇವರಲ್ಲಿ 62 ಡಿಸ್ಟಿಂಕ್ಷನ್, 34 ಪ್ರಥಮ ದರ್ಜೆ ಪಡೆದಿದ್ದಾರೆ. ಒಟ್ಟಾರೆ 100 ರಷ್ಟು ಫಲಿತಾಂಶ ಬಂದಿದೆ. ವೈಷ್ಣವಿದಾಸ 541ಶೇ (90.16), ಎಚ್.ಮಂಜುಳ 540 ಶೇ(90), ಪದ್ಮಾವತಿ 535(89.19) ಪಿ.ರೇಖಾ 535(89.19) ಪಿ ಅಶೋಕ 535(89.19) ಅಂಕಗಳನ್ನು ಪಡೆದಿದ್ದಾರೆ. ತೃತಿಯ ಸೇಮಿಸ್ಟರ್‌ನಲ್ಲಿ ಪರೀಕ್ಷೆಗೆ ಹಾಜರಾಗಿದ್ದ ವಿದ್ಯಾರ್ಥಿಗಳು 96 ಇದರಲ್ಲಿ ಡಿಸ್ಟಿಂಕ್ಷನ್ 73, ಪ್ರಥಮದರ್ಜೆ 23 ಒಟ್ಟು ಒಟ್ಟು ನೂರಕ್ಕೆ ನೂರರಷ್ಟು ಫಲಿತಾಂಶ ಬಂದಿದೆ. ಡಿ. ರಶ್ಮಿ544 (90.99),ಹುಳ್ಳಿ ದಿವ್ಯಾ 542(90.33) ಪೂಜಾರ ಹನುಮಂತಪ್ಪ 539(89.83) ಬಿ.ಅಶ್ವಿನಿ 537 (89.50) ಕವಿತರಾಣಿ 535(89.19) ಅಂಕಗಳನ್ನು ಪಡೆದು ಉತ್ತಮ ಸಾಧನೆ ಪಡೆದಿದ್ದಾರೆ. ವಿಧ್ಯಾರ್ಥಿಗಳ ಈ ಸಾಧನೆಗೆ ಜ್ಞಾನ ಭಾರತಿ ಸಮೂಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ.ಕೆ.ಎಂ.ರವಿಕುಮಾರ, ಆಡಳಿತಾಧಿಕಾರಿ ಜಿ.ಆರ್. ರಾಜು ಸೇರಿದಂತೆ ಪ್ರಾಚಾರ್ಯರು ಪ್ರಾಧ್ಯಾಪಕರು ಮತ್ತು ಸಿಬ್ಬಂದ್ದಿ ವರ್ಗದವರು ಹರ್ಷವ್ಯಕ್ತಪಡಿಸಿದ್ದಾರೆ.

# ಬಾಕಿ ಇರುವ ವ್ಯಾಜ್ಯಗಳನ್ನು ಇತ್ಯರ್ಥ ಮಾಡಿಕೊಳ್ಳಿ : ನ್ಯಾ.ಕೆ.ಜಿ ಶಾಂತಿ

■ **ಹಂಪಿ ಟೈಮ್ಸ್ ಬಳ್ಳಾರಿ:** ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ, ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ಜಿಲ್ಲಾ ಕಾನೂನುನ ಸೇವೆಗಳ ಪ್ರಾಧಿಕಾರ ವತಿಯಿಂದ ಸೆ.14 ರಂದು ನಡೆಯುವ "ರಾಷ್ಟ್ರೀಯ ಲೋಕ್ ಅದಾಲತ್"ನಲ್ಲಿ ಸಾರ್ವಜನಿಕರು ಭಾಗವಹಿಸಿ ಬಾಕಿ ಇರುವ ವ್ಯಾಜ್ಯಗಳನ್ನು ಇತ್ಯರ್ಥ ಮಾಡಿಕೊಳ್ಳಬಹುದು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಧೀಶೇ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷೆ ಕೆ.ಜಿ ಶಾಂತಿ ಅವರು ಹೇಳಿದರು. ನಗರದ ತಾಳೂರು ರಸ್ತೆಯ ನೂತನ ನ್ಯಾಯಾಲಯದ ಸಂಕೀರ್ಣದ ವಿಸಿ ಸಭಾಂಗಣದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಬಾಕಿ ಇರುವ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಬಗೆ ಹರಿಸಿಕೊಂಡು ಸಾಮರಸ್ಯ ಜೀವನ ನಡೆಸಬೇಕು ಎಂದು ತಿಳಿಸಿದರು.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ

ಹಂಪಿ ಟೈಮ್ಸ್
SSLC ಮಾರ್ಗದರ್ಶಿ
Academic Year 2024/2025
ಈ ಬಾರಿ ಫಲಿತಾಂಶ ನಮ್ಮದೆ






ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳು ಈ ಬಾರಿ ಶೇ.100ರಷ್ಟು ಅಂಕಗಳಿಸಬೇಕೆಂಬ ಮಹತ್ವಾಕಾಂಕ್ಷೆಯೊಂದಿಗೆ ವಿಜಯನಗರ ಜಿಲ್ಲೆಯ ವಿಷಯವಾರು ನುರಿತ ಮಾರ್ಗದರ್ಶಿ ಶಿಕ್ಷಕರಿಂದ ಸಿದ್ಧಗೊಂಡ ಪ್ರಶ್ನೋತ್ತರ ಸರಣಿಯನ್ನು ಈ ಬಾರಿ ಫಲಿತಾಂಶ ನಮ್ಮದೆ ಶೀರ್ಷಿಕೆಯಡಿ ಹಂಪಿ ಟೈಮ್ಸ್ ಮಾರ್ಗದರ್ಶಿಯಲ್ಲಿ ನಿತ್ಯ ಪ್ರಕಟಿಸಲಾಗುತ್ತಿದೆ.
ವಿದ್ಯಾರ್ಥಿಗಳು ಪ್ರತಿನಿತ್ಯ ಹಂಪಿ ಟೈಮ್ಸ್ ಪತ್ರಿಕೆಯಲ್ಲಿ ಪ್ರಕಟವಾಗುವ ವಿಷಯವಾರು ಪ್ರಶ್ನೋತ್ತರಗಳನ್ನು ಅಂದೇ ಬರೆದಿಟ್ಟುಕೊಂಡು ನಿರಂತರ ಅಭ್ಯಾಸ ಮಾಡಿದರೆ ಹೆಚ್ಚು ಅಂಕಗಳಿಕೆ ನಿಶ್ಚಿತ. ಎಸ್ಸೆಸ್ಸೆಲ್ಸಿ ಪರೀಕ್ಷೆ ವಂಚಿತರು, ಆಕಾಂಕ್ಷಿಗಳು ಸಹ ಹಂಪಿ ಟೈಮ್ಸ್ ಮಾರ್ಗದರ್ಶಿ ಅಭ್ಯಾಸ ಮಾಡಿ ತಮ್ಮ ಕನಸನ್ನು ಸಾಕರಗೊಳಿಸಿಕೊಳ್ಳಬಹುದು.

ಸುಲಭ ಮಾರ್ಗೋಪಾಯಗಳು

- ಪ್ರತಿದಿನ ಬರೆದು, ಓದುವೆ ಎಂಬುದು ಮೊದಲ ಗುರಿಯಾಗಲಿ
- ಬರೆದು ಓದುವ ಅಭ್ಯಾಸ ರೂಢಿಸಿಕೊಳ್ಳಿ
- ಓದುವಾಗ ಮೊದಲು ಕಂಠಪಾಠ ಮಾಡಬಾರದು
- ಟೆಸ್ಟ್ ಪರೀಕ್ಷೆಯಲ್ಲಿ ಎಂದಿಗೂ ಯಾವುದೇ ಪ್ರಶ್ನೆಗಳನ್ನು ಬಿಡಬೇಡಿ
- ಕಳೆದ ವರ್ಷಗಳಲ್ಲಿ ಕೇಳಿದ ಪ್ರಶ್ನೆಗಳನ್ನು ಹೆಚ್ಚು ಅಭ್ಯಾಸ ಮಾಡಿ
- ಪುಸ್ತಕಗಳಲ್ಲಿನ ಪಠ್ಯವನ್ನು ಸಂಪೂರ್ಣವಾಗಿ ಓದಿರಿ.
- ಗೊಂದಲಗಳಿದ್ದಲ್ಲಿ ನಿಮ್ಮ ವಿಷಯವಾರು ಶಿಕ್ಷಕರನ್ನು ಕೇಳಿ ಪರಿಹರಿಸಿಕೊಳ್ಳಿ






CONTACT US
94486 33038
www.hampitimes.com / https://epaper.hampitimes.com
ನಿನ್ನ ಏಳ್ಗೆಗೆ ನೀನೇ ಶಿಲ್ಪಿ
scan to read

SSLC ಈ ಬಾರಿ ಫಲಿತಾಂಶ ನಮ್ಮದೆ
ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ
Hampi Times Margadarshi
ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು
ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಸಮಾಜ ವಿಜ್ಞಾನ

## ಇತಿಹಾಸ ಅಧ್ಯಾಯ: 3

## ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

**1) ಖಾಯಂ ಜಮಿನ್ದಾರಿ ಪದ್ದತಿಯನ್ನು / ಭಾರತದಲ್ಲಿ ನಾಗರಿಕ ಸೇವಾ ವ್ಯವಸ್ಥೆ / ಸೂಪರಿಟೆಂಡೆಂಟ್ ಆಫ್ ಪೊಲೀಸ್ ಹುದ್ದೆ / ಪರಿಚಯಿಸಿದವರು ಯಾರು?**
ಉತ್ತರ:– ಲಾರ್ಡ್ ಕಾರ್ನ್‌ವಾಲೀಸ್

2. ಹಿಂದೂಸ್ಥಾನದಲ್ಲಿರುವ ಪ್ರತಿಯೊಬ್ಬ ಮೂಲ ನಿವಾಸಿಯೂ ಭ್ರಷ್ಟ ಎಂದು ಪ್ರತಿಪಾದಿಸಿದವರು ಯಾರು?
ಉತ್ತರ:– ಲಾರ್ಡ್ ಕಾರ್ನ್‌ವಾಲೀಸ್

**3) ರೈತವಾರಿ ಪದ್ಧತಿಯನ್ನು ಪರಿಚಯಿಸಿದವರು ಯಾರು?**
ಉತ್ತರ:– ಅಲೆಕ್ಸಾಂಡರ್ ರೀಡ್

**4) ಮಹಲ್ವಾರಿ ಪದ್ಧತಿಯನ್ನು ಪರಿಚಯಿಸಿದವರು ಯಾರು?**
ಉತ್ತರ:– ಆರ್ ಎಂ ಬರ್ಡ್ ಮತ್ತು ಜೇಮ್ಸ್ ಥಾಮ್ಸನ್

**5) ಮೆಕಾಲೆ ವರದಿಯಂತೆ ಆಧುನಿಕ ಶಿಕ್ಷಣ ವ್ಯವಸ್ಥೆಗೆ** ಬುನಾದಿ ಹಾಕಿದವನು ಯಾರು?
ಉತ್ತರ:– ಲಾರ್ಡ್ ವಿಲಿಯಂ ಬೆಂಟಿಂಕ್

**6) ಕಲ್ಕತ್ತದಲ್ಲಿ ಸುಪ್ರೀಂ ಕೋರ್ಟ್? ಸ್ಥಾಪನೆಗೆ ಕಾರಣವಾದ ಕಾಯ್ದೆ ಯಾವುದು?**
ಉತ್ತರ:– 1773 ರ ರೇಗ್ಯುಲೇಟಿಂಗ್ ಕಾಯ್ದೆ

**7). ವಾರನ್ ಹೆಸ್ಟಿಂಗ್ಸ್ ರೂಪಿಸಿದ ಎರಡು ಬಗೆಯ ನ್ಯಾಯಾಲಯಗಳನ್ನು ಹೆಸರಿಸಿ**
ಉತ್ತರ:– 1)'ದಿವಾನಿಅದಾಲತ್' ಎಂಬ ನಾಗರೀಕ ನ್ಯಾಯಾಲಯಗಳು ಮತ್ತು 2) ನಿಜಾಮತ್ ಅದಾಲತ್' ಎಂಬ ಅಪರಾಧ ನ್ಯಾಯಾಲಯಗಳು

**8) 1909 ರಲ್ಲಿ ಪ್ರತ್ಯೇಕ ಚುನಾವಣಾ ಮತಗಟ್ಟೆ ವ್ಯವಸ್ಥೆಯನ್ನು ರಚಿಸಲು ಕಾರಣವೇನು?**
ಉತ್ತರ:– ಮುಸ್ಲಿಂರಿಗೆ ಪ್ರತ್ಯೇಕ ಪ್ರಾತಿನಿಧ್ಯ ನೀಡಲು

**9) ಪಾಲಸಿ ಆಫ್ ಅಸರ್ಷನ್ ಎಂದರೇನು?**
ಉತ್ತರ:– ಭಾರತೀಯರು ಬ್ರಿಟಿಷ್ ಬಗೆಗೆ ಹೊಂದಿರುವ ಅಭಿಪ್ರಾಯಗಳನ್ನು ತಿಳಿಯಲು ಭಾರತೀಯರಿಗೆ ಪ್ರಾತಿನಿಧ್ಯ ನೀಡುವುದು

**10) ಬ್ರಿಟಿಷ್ ಭೂಕಂದಾಯ ನೀತಿಗಳಿಂದ "ಭಾರತದ ರೈತರು ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿ, ಸಾಲದಲ್ಲೇ ಸತ್ತರು" ಎಂಬ ಹೇಳಿಕೆಯನ್ನು ನೀಡಿದವರು ಯಾರು?**
ಉತ್ತರ:– ಚಾರ್ಲ್ಸ್‌ಮೆಟ್ ಕಾಫ್

**11. ಆಧುನಿಕ ಭಾರತದ ಶಿಕ್ಷಣ ವ್ಯವಸ್ಥೆಗೆ ತಳಹದಿಯಾದ ವರದಿ ಯಾವುದು ?**
ಉತ್ತರ:– ಮೆಕಾಲೆ ವರದಿ

**12) ಭಾರತದಲ್ಲಿ ಬ್ರಿಟಿಷ್ ಭೂಕಂದಾಯದ ಪದ್ದತಿಯಿಂದಾದ ಪರಿಣಾಮಗಳೇನು? (3ಅಂಕ)**
ಉತ್ತರ:– ರೈತರನ್ನು ಶೋಷಿಸುವ ಹೊಸ ಜಮೀನ್ದಾರಿ ವರ್ಗ ಹುಟ್ಟಿಕೊಂಡಿತು.
* ರೈತರು ವಿವಿಧ ಸಂಕಷ್ಟಗಳಿಗೆ ಒಳಗಾದರು.
* ಭೂಮಿಯು ಮಾರಾಟದ ವಸ್ತುವಾಯಿತು
* ಕೃಷಿ ವಾಣಿಜ್ಯಕರಣಗೊಂಡಿತು
* ಇಂಗ್ಲೆಂಡಿನ ಕೈಗಾರಿಕೆಗೆ ಬೇಕಾದ ಬೆಳೆಯನ್ನೇ ಬೆಳೆಯಬೇಕಾಯಿತು.
* ಹಣದ ಲೇವಾದೇವಿದಾರರು ಬಲಿಷ್ಠರಾದರು.
* ಅನೇಕ ಜಮೀನ್ದಾರರು ಕಂದಾಯ ಸಲ್ಲಿಸಲು ತಮ್ಮ ಭೂಮಿ ಅಡವಿಟ್ಟರು

**13) ಭಾರತದಲ್ಲಿ ಬ್ರಿಟಿಷ್ ಶಿಕ್ಷಣದಿಂದ ಉಂಟಾದ ಪರಿಣಾಮಗಳನ್ನು ಪಟ್ಟಿ ಮಾಡಿ (3ಅಂಕ) (ಸೆಪ್ಟಂಬರ್.2022, ಜೂನ್ 2023)**
ಉತ್ತರ:– ಭಾರತೀಯರು ಆಧುನಿಕತೆ, ಪ್ರಜಾಪ್ರಭುತ್ವ ಮೊದಲಾದ ಪರಿಕಲ್ಪನೆಗಳ ಪರಿಚಯವಾಯಿತು
* ರಾಷ್ಟ್ರೀಯವಾದಿ ದೃಷ್ಟಿಕೋನಗಳನ್ನು ಬೆಳೆಸಿಕೊಂಡರು.
* ಸ್ಥಳೀಯ ಭಾಷೆಗೆ ಮತ್ತು ಸಾಹಿತ್ಯಕ್ಕೆ ಪ್ರೋತ್ಸಾಹ ದೊರೆಯಿತು.
* ವೃತ್ತ ಪತ್ರಿಕೆಗಳು ಹುಟ್ಟಿಕೊಂಡವು.
* ಹೊಸ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳವಳಿಗಳು ಹುಟ್ಟಿಕೊಂಡವು.
* ಬ್ರಿಟಿಷ್ ಆಡಳಿತದ ವಿಮರ್ಶೆ ಆರಂಭವಾಯಿತು
* ಮಿಲ್, ರೂಸೋ ಮುಂತಾದವರ ಚಿಂತನೆಗಳು ಭಾರತೀಯರ ಆಲೋಚನಾಕ್ರಮದಲ್ಲಿ ನಾವಿನ್ಯತೆಯನ್ನು ತಂದವು.
* ಜಗತ್ತಿನ ಸ್ವಾತಂತ್ರ್ಯ ಚಳವಳಿಗಳು ಭಾರತೀಯರ ಮೇಲೆ ಪ್ರಭಾವ ಬೀರಿತು.
* ಭಾರತೀಯರು ತಮ್ಮ ಸಾಂಸ್ಕೃತಿಕ ಪರಂಪರೆಗಳನ್ನುಅರಿತುಕೊಂಡರು

**14.ರೆಗ್ಯುಲೇಟಿಂಗ್ ಕಾಯ್ದೆ ಹೊಂದಿದ್ದ ನಿಬಂಧನೆಗಳಾವುವು? (3 ಅಂಕ)**
ಉತ್ತರ:– ಬಂಗಾಳದ ಪ್ರೆಸಿಡೆನ್ಸಿಯು ಬಾಂಬೆ & ಮದ್ರಾಸ್ ಪ್ರೆಸಿಡೆನ್ಸಿಗಳ ಮೇಲೆ ಅಧಿಕಾರವನ್ನು ಪಡೆಯಿತು.
* ಬಂಗಾಳದ ಗವರ್ನರನು 3 ಪ್ರೆಸಿಡೆನ್ಸಿಗಳ ಗವರ್ನರ್ ಜನರಲ್ ಆದನು
* ಗವರ್ನರ್ ಜನರಲ್ ನಿರ್ದೇಶಿಸುವ, ನಿಯಂತ್ರಿಸುವ ಮತ್ತು ಮೇಲ್ವಿಚಾರಣೆ ಮಾಡುವ ಅಧಿಕಾರ ನೀಡಿತು.
* ಬಾಂಬೆ ಮತ್ತು ಮದರಾಸು ಸರ್ಕಾರಗಳು ಯಾರ ಮೇಲೂ ಯುದ್ಧ ಅಥವಾ ಶಾಂತಿ ಘೋಷಿಸುವಂತಿಲ್ಲ
* ಕಲ್ಕತ್ತಾದಲ್ಲಿ "ಸುಪ್ರೀಂಕೋರ್ಟ್" ಅನ್ನು ಸ್ಥಾಪಿಸಲಾಯಿತು

**15) 1909ರ ಭಾರತೀಯ ಪರಿಷತ್ ಕಾಯ್ದೆ (ಮಿಂಟೋಮಾರ್ಲೆ ಸುಧಾರಣೆ)ಯ ಪ್ರಮುಖಾಂಶಗಳಾವುವು?(ಎಪ್ರಿಲ್ 2023)**
ಉತ್ತರ:– * ಕೇಂದ್ರ ಶಾಸನ ಸಭೆಗಳ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಲಾಯಿತು. (16 ರಿಂದ 60)
* ಪ್ರಾಂತ್ಯ ಶಾಸನ ಸಭೆ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಲಾಯಿತು.
* ಚುನಾವಣೆಗಳಿಗೆ ಅವಕಾಶ ನೀಡಲಾಯಿತು.
* ಮುಸ್ಲಿಮರಿಗೆ "ಪ್ರತ್ಯೇಕ ಚುನಾವಣಾ ಮತಗಟ್ಟೆ" ಜಾರಿಯಾಯಿತು.

**16) 1935ರ ಭಾರತ ಸರ್ಕಾರದ ಕಾಯ್ದೆಯ ಪ್ರಮುಖಾಂಶಗಳು ಯಾವುವು? ಅಥವಾ 1935ರ ಭಾರತ ಸರ್ಕಾರದ ಕಾಯ್ದೆ 'ಭಾರತ ಸಂವಿಧಾನದ ಬುನಾದಿ' ಸಮರ್ಥಿಸಿ.**
ಉತ್ತರ:– ಭಾರತದ ಸಂವಿಧಾನ ರಚನೆಗೆ ಈ ಕಾಯ್ದೆಯು ಬುನಾದಿಯಾಗಿದೆ.
* ಅಖಿಲ ಭಾರತ ಒಕ್ಕೂಟ ರಚನೆಯಾಯಿತು.
* ಕೇಂದ್ರದಲ್ಲಿ 'ದ್ವಿ ಸರಕಾರ' ಸ್ಥಾಪಿಸಲಾಯಿತು.
* ಪ್ರಾಂತ್ಯಗಳಿಗೆ ಸ್ವಾಯತ್ತತೆ ನೀಡಲಾಯಿತು.
* ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆಯಾಯಿತು.
* ಭಾರತದಲ್ಲಿ 'ಫೆಡರಲ್ ಕೋರ್ಟ್' ಸ್ಥಾಪನೆಯಾಯಿತು.

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : **ಕೊಟ್ರೇಶ್ ಮಾಳಿಗಿ, ಸಮಾಜ ವಿಜ್ಞಾನ ಶಿಕ್ಷಕರು,** ಬ್ಯಾಸಿಗಿದೇರಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಕ.ರಾ.ಮಕ್ಕಳ ಸಾಹಿತ್ಯ ಪರಿಷತ್, ವಿಜಯನಗರ ಜಿಲ್ಲೆ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055